20 November 2025 Thursday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 37 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಜೀವನದಲಿ ಎಡವುದು ಸಹಜ! ಆದರೆ
ಅದೇ ಕಲ್ಲಿಗೆ ಮತ್ತೆ ಮತ್ತೆ ಎಡವುದು
ತಪ್ಪು!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಗೆಲ್ಲೋ ತನಕ
ಕಿವುಡರಾಗಬೇಕು....
ಗೆದ್ದ ಮೇಲೆ
ಮೂಕರಾಗಿರಬೇಕು

ಮೈಲಾರ ಸಾವಿತ್ರಿಬಾಯಿ

# ಸಿಎಂಎಸ್ ವಾಹನ ತಡೆದು 7 ಕೋಟಿ ಹಣ ದರೋಡೆ

**ಬೆಂಗಳೂರು:** ಬೆಂಗಳೂರಿನಲ್ಲಿ ಹಾಡಹಗಲೇ ಜನನಿಬಿಡ ರಸ್ತೆಯಲ್ಲಿ ಬರೋಬ್ಬರಿ 7.11 ಕೋಟಿ ರೂ. ನಗದು ದರೋಡೆ ಮಾಡಿ ಪರಾರಿಯಾಗಿರುವ ಘಟನೆ ಬುಧವಾರ ಮಧ್ಯಾಹ್ನ ನಡೆದಿದೆ.

ನಗರದ ಜಯದೇವ ಡೇರಿ ಸರ್ಕಲ್ ಬಳಿ ದರೋಡೆ ನಡೆದಿದೆ. ಒಂದು ವಾಹನದಿಂದ ಇನ್ನೊಂದು ವಾಹನಕ್ಕೆ ಹಣ ಶಿಫ್ಟ್ ಮಾಡುತ್ತಿದ್ದ ವೇಳೆ ಏಕಾಏಕಿ ಬಂದ ಗ್ಯಾಂಗ್ 7.11 ಕೋಟಿ ರೂಪಾಯಿ ಹಣ ದರೋಡೆ ಮಾಡಿದೆ.

ಎಟಿಎಂಗೆ ಹಣ ತುಂಬುವ ವಾಹನದಲ್ಲಿ ಹಣ ದರೋಡೆ ಮಾಡಲಾಗಿದೆ. ಜೆಪಿ ನಗರದ ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ಸಿಎಂಎಸ್ ವಾಹನದಲ್ಲಿ ಹಣ ತರುತ್ತಿದ್ದ ವೇಳೆ ಇನ್ನೋವಾ ಕಾರಿನಲ್ಲಿ ಬಂದ ದರೋಡೆಕೋರರು, ತೆರಿಗೆ ಇಲಾಖೆ ಅಧಿಕಾರಿಗಳು ಎಂದು ಹೇಳಿ ಹಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲನೆ ನಡೆಸಬೇಕು ಎಂದು ಬೆದರಿಕೆ ಹಾಕಿದ್ದಾರೆ. ಈ ವೇಳೆ ಹಣದ ಸಮೇತ ಸಿಬ್ಬಂದಿಯನ್ನು ಕಾರಿನಲ್ಲಿ ಕೂರಿಸಿಕೊಂಡು ಹೋಗಿರುವ ದರೋಡೆಕೋರರು, ಬಳಿಕ ಡೇರಿ ವೃತ್ತದಲ್ಲಿ ಸಿಎಂಎಸ್ ಸಿಬ್ಬಂದಿಯನ್ನು ಬಿಟ್ಟು ಹಣದೊಂದಿಗೆ ಪರಾರಿಯಾಗಿದ್ದಾರೆ.

ಡೇರಿ ಸರ್ಕಲ್ ಫ್ಲೈಓವರ್ ಮೇಲೆ ವಾಹನ ನಿಲ್ಲಿಸಿ ಅದರಲ್ಲಿದ್ದ ಹಣವನ್ನು ಇನ್ನೋವಾ ಕಾರಿಗೆ ತುಂಬಿಕೊಂಡು ಪರಾರಿಯಾಗಿದ್ದಾರೆ. ಎಟಿಎಂ ವಾಹನದಲ್ಲಿ ಒಟ್ಟು ನಾಲ್ಕು ಸಿಎಂಎಸ್ ಸಿಬ್ಬಂದಿ ಇದ್ದರು. ಓರ್ವ ಡ್ರೈವರ್, ಇಬ್ಬರು ಗನ್ ಮ್ಯಾನ್ ಹಾಗೂ ಮತ್ತೊಬ್ಬ ಹಣ ಹಾಕುವ ಸಿಬ್ಬಂದಿ ಇದ್ದರು.

ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ.

## 7 ಜನರ ಗ್ಯಾಂಗ್‌ನಿಂದ ದಾಳಿ

ಎಟಿಎಂ ಹಣ ಸಾಗಿಸುವ ವ್ಯಾನ್‌ನಲ್ಲಿ ಓರ್ವ ಡ್ರೈವರ್, ಇಬ್ಬರು ಗನ್ ಮ್ಯಾನ್ ಹಾಗೂ ಮತ್ತೊಬ್ಬ ಹಣ ಹಾಕುವ ಸಿಬ್ಬಂದಿ ಸೇರಿ 4 ಮಂದಿ ಇದ್ದರು. ಕೆಎ 03 ಎನ್‌ಸಿ 8052 ನಂಬರ್ ಇನ್ನೋವಾ ಕಾರಿನಲ್ಲಿ ಬಂದಿದ್ದ ಗ್ಯಾಂಗ್‌ನಲ್ಲಿ 7ರಿಂದ 8 ಜನರ ಇದ್ದರು. ಕಾರಿನ ಹಿಂಬದಿ ಗವರ್ನಮೆಂಟ್ ಆಫ್ ಇಂಡಿಯಾ ಎಂಬ ಬೋರ್ಡ್ ಹಾಕಿಕೊಂಡಿದ್ದರು. ಜಯನಗರದ ಅಶೋಕ ಪಿಲ್ಲರ್ ಬಳಿ ನಾವು ಆರ್‌ಬಿಐನವರು ಎಂದು ಹೇಳಿ ವಾಹನ ನಿಲ್ಲಿಸಿದ್ದಾರೆ. ಗನ್‌ಮ್ಯಾನ್ ಸೇರಿದಂತೆ ಎಲ್ಲರನ್ನೂ ವ್ಯಾನ್‌ನಿಂದ ಇಳಿಸಿ



ವಾಹನ ಸಮೇತ ಚಾಲಕನನ್ನು ಡೇರಿ ಸರ್ಕಲ್‌ಗೆ ಕರೆದೊಯ್ದಿದ್ದು ಕೃತ್ಯವೆಸಗಿದ್ದಾರೆ. ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಪೊಲೀಸ್ ತಂಡವು ಶ್ವಾನದಳ ಆಗಮಿಸಿ ವಿವಿಧ

ಪುಟ 2ಕ್ಕೆ


# ಕೆಪಿಸಿಸಿ ಅಧ್ಯಕ್ಷತೆಗೆ 'ಗುಡ್ ಬೈ'

## ಹುದ್ದೆ ತೊರೆಯುವ ಹಿಂಗಿತ ವ್ಯಕ್ತಪಡಿಸಿದ ಡಿ.ಕೆ.ಶಿವಕುಮಾರ್

**ಬೆಂಗಳೂರು:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನ ತೊರೆಯುವ ಬಗ್ಗೆ ಪರೋಕ್ಷವಾಗಿ ಮಾತನಾಡಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ದಿ.ಇಂದಿರಾ ಗಾಂಧಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ನಾನು ಶಾಶ್ವತವಾಗಿ ಇರಲು ಬಯಸುವುದಿಲ್ಲ ಎಂದು ಹೇಳಿದರು.

ನಾನು ಶಾಶ್ವತವಾಗಿ ಇರಲು ಆಗದು. ಬೇರೆಯವರಿಗೆ ಅವಕಾಶ ನೀಡಬೇಕು. ನಾನು ಎಲ್ಲಿರುತ್ತೇನೋ ಎಲ್ಲಿ ಇರುವುದಿಲ್ಲವೋ ಎನ್ನುವುದು ಮುಖ್ಯ ಅಲ್ಲ. 2028ಕ್ಕೆ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂಬುದೇ ನಮ್ಮ ಉದ್ದೇಶ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



2020ರಲ್ಲಿ ಕೆಪಿಸಿಸಿ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ್ದೇನೆ. ಈಗಾಗಲೇ ಐದು ವರ್ಷ, ಐದು ತಿಂಗಳು ಪೂರೈಸಿದ್ದೇನೆ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದು ಅಧಿಕಾರಕ್ಕೆ ಬಂದಾಗ ಉಪಮುಖ್ಯಮಂತ್ರಿಯಾದೆ. ಆಗಲೇ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಡಲು ಸಿದ್ಧವಾಗಿದ್ದೆ. ಹೈಕಮಾಂಡ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ಸೂಚನೆಯಂತೆ ಮುಂದುವರಿದಿದ್ದೇನೆ. ಬರುವ ಮಾರ್ಚ್ಗೆ ಆರು ವರ್ಷ ತುಂಬುತ್ತದೆ. ಇತರರಿಗೂ ಅವಕಾಶ ನೀಡಬೇಕು ಎಂದು ಅವರು ಹೇಳಿದ್ದಾರೆ.

ಇದುವರೆಗೆ ನಾನೇಕೆ ರಾಜೀನಾಮೆ ನೀಡಬೇಕು ಎಂದು ಪ್ರಶ್ನಿಸುತ್ತಿದ್ದ ಡಿಕೆಶಿ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಅಚ್ಚರಿಗೆ ಕಾರಣವಾಗಿದೆ. ಅನಿರೀಕ್ಷಿತ ಹೇಳಿಕೆಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು ಗೊಂದಲಕ್ಕೆ ಒಳಗಾದರು. ಕೆಲವರು ಆಕ್ಷೇಪ ವ್ಯಕ್ತಪಡಿಸಿದರು. ಅವರನ್ನು ಸಮಾಧಾನಪಡಿಸಿದ ಶಿವಕುಮಾರ್, ನಾನು ಇದ್ದೇನೋ, ಇಲ್ಲವೋ ಎಂಬುದು ಮುಖ್ಯವಲ್ಲ. ಸ್ಥಾನ ತೊರೆದರೂ, ನಾಯಕತ್ವ, ಪಕ್ಷದ ಮುಂಚೂಣಿಯಲ್ಲಿ ಇದ್ದು ಕೆಲಸ ಮಾಡುತ್ತೇನೆ. ನಾನು ಎಲ್ಲಿದ್ದೇನೆ. ಏನಾಗಿದ್ದೇನೆ ಎನ್ನುವುದು ಮುಖ್ಯವಲ್ಲ. ನನ್ನ ಅವಧಿಯಲ್ಲಿ ಮಾಡಿದ ಕೆಲಸಗಳು ಶಾಶ್ವತವಾಗಿರುತ್ತವೆ. ರಾಜ್ಯದಲ್ಲಿ ಕಾಂಗ್ರೆಸ್ 100 ಹೊಸ ಭವನಗಳ ನಿರ್ಮಾಣ ಕಾರ್ಯ ಆರಂಭಿಸಿದ್ದೇನೆ. ಪಕ್ಷದ ಅಧ್ಯಕ್ಷನಾಗಿ ಒಂದು ಮಾದರಿಯನ್ನು ಸ್ಥಾಪಿಸಿದ್ದೇನೆ. ಗಾಂಧಿ ಕುಟುಂಬ ಹಾಗೂ ಎಐಸಿಸಿ ಅಧ್ಯಕ್ಷರು ಬಯಸುವವರೆಗೂ ಕೆಲಸ ಮಾಡುತ್ತೇಲೇ ಇರುತ್ತೇನೆ ಎಂದು ಹೇಳಿದರು.

ಬಿಹಾರ ಚುನಾವಣಾ ಫಲಿತಾಂಶ ಉಲ್ಲೇಖಿಸಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಬೇರುಗಳು ಗಟ್ಟಿಯಾಗಿವೆ. ಖಂಡಿತವಾಗಿಯೂ ಕರ್ನಾಟಕದಲ್ಲಿ ಪಕ್ಷ ಅಧಿಕಾರವನ್ನು ಉಳಿಸಿಕೊಳ್ಳುತ್ತದೆ. ಪಕ್ಷದ ಕಾರ್ಯಕರ್ತರೂ ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ಆದರೆ, ನಾನು ಓಡಿಹೋಗುವುದಿಲ್ಲ ಎಂದು ಹೇಳಿದರು.

ಕಾರ್ಯಕ್ರಮ ಮುಗಿದು ಶಿವಕುಮಾರ್ ಅವರು ಭವದಿಂದ ಹೊರಬರುತ್ತಿದ್ದಂತೆ ಕಾರ್ಯಕರ್ತರು ಡಿ.ಕೆ.ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಎಂಬ ಘೋಷಣೆ ಕೂಗಿದರು.

## ಪಕ್ಷದ ಕಚೇರಿ ಮರೆತ ನಾಯಕರು!

**ಬೆಂಗಳೂರು:** ಕೆಲವು ನಾಯಕರು ಪಕ್ಷದ ಕಚೇರಿಯನ್ನೇ ಮರೆತುಬಿಟ್ಟಿದ್ದಾರೆ. ಪಕ್ಷ ಅಂದ್ರೆ ದೇವಸ್ಥಾನ ಎನ್ನುವುದನ್ನೇ ಕೆಲವರು ಮರೆತಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು. ಯಾರು ನೂರು ಕೆಪಿಸಿಸಿ ಕಟ್ಟಡ ಕಟ್ಟಲು ಆಸಕ್ತಿ ವಹಿಸಲ್ಲ ಅಂಥವರ ಪಟ್ಟಿಯನ್ನು ನಾನು ಹೈಕಮಾಂಡ್ ಗೆ ನೀಡುತ್ತೇನೆ. ಅವರಿಗೆಲ್ಲ ನಾನು ಉತ್ತರ ಕೊಡೋದಕ್ಕೆ ಹೋಗಲ್ಲ. ಎಲ್ಲದಕ್ಕೂ ದೆಹಲಿಯವರೇ ಉತ್ತರ ಕೊಡ್ತಾರೆ. ಯಾರು ಪಕ್ಷದ ಕೆಲಸಕ್ಕೆ ಆಸಕ್ತಿ ವಹಿಸಲ್ಲ ಅವರಿಗೆ ಹೈಕಮಾಂಡ್ ಸೂಕ್ತ ಸಂದರ್ಭದಲ್ಲಿ ಉತ್ತರ ಕೊಡ್ತಾರೆ ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದರು.

# ದರ್ಶನ್‌ಗೆ ಹೆಚ್ಚುವರಿ ಕಂಬಳಿ ನೀಡಲು ಕೋರ್ಟ್ ಆದೇಶ

**ಬೆಂಗಳೂರು:** ಚಳಿಯಿಂದಾಗಿ ನಿದ್ರೆ ಕೂಡ ಬರುತ್ತಿಲ್ಲ ಎಂದು ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ಬುಧವಾರ ಬೆಂಗಳೂರಿನ ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಹೆಚ್ಚುವರಿ ಕಂಬಳಿ ನೀಡುವಂತೆ ಮನವಿ ಮಾಡಿದ್ದಾರೆ.



ವಿಡಿಯೋ ಕಾನ್ಫರೆನ್ಸ್ ಮೂಲಕ ದರ್ಶನ್ ಅವರನ್ನು 57ನೇ ಸಿಸಿಹೆಚ್ ನ್ಯಾಯಾಲಯದ ಮುಂದೆ ಬುಧವಾರ ಹಾಜರುಪಡಿಸಲಾಯಿತು. ಚಳಿಯಿಂದ ನನಗೆ ನಿದ್ರೆ ಬರುತ್ತಿಲ್ಲ ಮತ್ತು ಅಧಿಕಾರಿಗಳು ಕಂಬಳಿ ನೀಡಲು ನಿರಾಕರಿಸುತ್ತಿದ್ದಾರೆ. ಜೈಲು ಅಧಿಕಾರಿಗಳು ನಮ್ಮ ಕುಟುಂಬ ನೀಡಿದ ಬೆಡ್‌ಶೀಟ್ ಬಳಸಲು ಸಹ ಅನುಮತಿ ನೀಡುತ್ತಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ನ್ಯಾಯಾಲಯವು ಪದೇ ಪದೆ ಸೂಚನೆಗಳನ್ನು ನೀಡುತ್ತಿದ್ದರೂ ಜೈಲು ಅಧಿಕಾರಿಗಳು ಈ ರೀತಿ ವರ್ತಿಸುತ್ತಿರುವುದು ಏಕೆ ಎಂದು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಾಧೀಶರು, ಅಧಿಕಾರಿಗಳು ಶೀತ ವಾತಾವರಣದಲ್ಲಿ ಕಂಬಳಿಯನ್ನು ನಿರಾಕರಿಸುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ತಕ್ಷಣವೇ ದರ್ಶನ್ ಅವರಿಗೆ ಹೆಚ್ಚುವರಿ ಕಂಬಳಿಯನ್ನು ಒದಗಿಸಬೇಕು ಎಂದು ನಿರ್ದೇಶಿಸಿದರು.

ವಿಚಾರಣಾ ಪ್ರಕ್ರಿಯೆಯನ್ನು ಪ್ರಾರಂಭಿಸಿದ ನ್ಯಾಯಾಲಯ, ಸಿಆರ್‌ಪಿಸಿ 264ರ ಅಡಿಯಲ್ಲಿ ನಿರ್ವಿವಾದಿತ ಸಾಕ್ಷ್ಯಚಿತ್ರ ಸಾಕ್ಷ್ಯವನ್ನು ಗುರುತಿಸಲು ಪ್ರಾಸಿಕ್ಯೂಷನ್ ಅರ್ಜಿಯನ್ನು ಕೈಗೆತ್ತಿಕೊಂಡಿತು. ದರ್ಶನ್ ಅವರ ವಕೀಲರು ಅರ್ಜಿಗೆ ಆಕ್ಷೇಪ ವ್ಯಕ್ತಪಡಿಸಿದರು. ನಂತರ ಪ್ರಕರಣವನ್ನು ಡಿ. 3ಕ್ಕೆ ಮುಂದೂಡಲಾಯಿತು.

ವಿಚಾರಣೆ ಸಮಯದಲ್ಲಿ, ಸಿಆರ್‌ಪಿಸಿ ಸೆಕ್ಷನ್ 264ರ ಅಡಿಯಲ್ಲಿ ಕೆಲವು ದಾಖಲೆಗಳನ್ನು

ಪುಟ 2ಕ್ಕೆ

# ನನ್ನ ಮನವಿಗೆ ಕೇಂದ್ರದ ಸ್ಪಂದನೆ

## ಸಕ್ಕರೆ ಕನಿಷ್ಠ ಮಾರಾಟ ಬೆಲೆ ಹೆಚ್ಚಳ | ಸಿಎಂ ಸಿದ್ದರಾಮಯ್ಯ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ವಿಷಯವನ್ನು ಅವರ ಬಳಿ ಪ್ರಸ್ತಾಪಿಸಿದ ನಂತರವೇ ಸಕ್ಕರೆ ಕನಿಷ್ಠ ಮಾರಾಟ ಬೆಲೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಅಭಿಪ್ರಾಯಪಟ್ಟರು.



ಕೇಂದ್ರ ಸರ್ಕಾರ ಸಕ್ಕರೆಯ ಕನಿಷ್ಠ ಮಾರಾಟ ಬೆಲೆ ಕೆಜಿಗೆ 31 ರೂ.ಗಳಿಂದ 40 ರೂ.ಗಳಿಗೆ ಹೆಚ್ಚಿಸುವ ಬಗ್ಗೆ ಪರಿಗಣಿಸುವುದಾಗಿ ತಿಳಿಸಿದೆ. ನಾನು ಪ್ರತಿ ಕೆಜಿ ಸಕ್ಕರೆಗೆ 41 ರೂ. ಕೇಳಿದ್ದೆ. ನಾನು ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿ ವಿನಂತಿಸಿದ ನಂತರ ಅವರು ಈ ಕ್ರಮ ಕೈಗೊಂಡಿದ್ದಾರೆ ಎಂದು ಸಿದ್ದರಾಮಯ್ಯ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸಕ್ಕರೆ ಕಾರ್ಖಾನೆಗಳು ಬೆಲೆ ಏರಿಕೆ

ಪುಟ 2ಕ್ಕೆ

## 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರದ ಅನುಮತಿ

**ನವದೆಹಲಿ:** ಅಕ್ಟೋಬರ್‌ನಿಂದ ಪ್ರಾರಂಭವಾಗುವ 2025-26ರ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ ಕೇಂದ್ರ ಸರ್ಕಾರ 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಅನುಮತಿ ನೀಡಿದೆ. ಕೈಗಾರಿಕೆಗಳು ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಹೆಚ್ಚಿಸುವಂತೆ ಬೇಡಿಕೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ಈ ಕುರಿತು ಪರಿಶೀಲನೆ ನಡೆಸಲಾಗುವುದು ಎಂದು ಕೇಂದ್ರ ಆಹಾರ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. 2019ರ ಫೆಬ್ರುವರಿಯಿಂದ ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯು ಕೆಜಿಗೆ 31 ರೂ. ಇದೆ. ಅಂದಿನಿಂದ ಈ ಬೆಲೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಉತ್ಪಾದನಾ ವೆಚ್ಚ ಹೆಚ್ಚಳವಾಗಿದ್ದು, ಪ್ರತಿ ಕೆಜಿ ಸಕ್ಕರೆ ಬೆಲೆಯನ್ನು

ಪುಟ 2ಕ್ಕೆ

## ಜೈಲ್ ವಿಡಿಯೋ ವೈರಲ್ ಹಿಂದೆ ವಿಜಯಲಕ್ಷ್ಮೀ ಭಾಗಿ?

**ಬೆಂಗಳೂರು:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಕೈಯಲ್ಲಿ ಮೊಬೈಲ್, ಟಿವಿ ವ್ಯವಸ್ಥೆ ಮದ್ಯದ ಪಾರ್ಟಿ ಮಾಡುತ್ತಿರುವ ವಿಡಿಯೋ ವೈರಲ್ ಆಗಿತ್ತು. ನಟ ಹಾಗೂ ದರ್ಶನ್ ಆಪ್ತ ಧನ್ವೀರ್ ವಿರುದ್ಧ ವಿಡಿಯೋ ಲೀಕ್ ಆರೋಪ ಕೇಳಿಬಂದಿತ್ತು. ಪೊಲೀಸರು ಧನ್ವೀರ್ ವಿಚಾರಣೆ ನಡೆಸಿದ್ದರು. ಮೊದಲಿಗೆ ನನಗೆ



ಪುಟ 2ಕ್ಕೆ

## ವಿಧಾನಸೌಧದ ಮುಂದೆ ಯುವಕರ ಹೊಡೆದಾಟ

**ಬೆಂಗಳೂರು:** ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಪುಂಡಾಟ ಮಿತಿ ಮೀರಿದೆ. ಯುವಕರ ಹೊಡೆದಾಟ ಇದೀಗ ವಿಧಾನಸೌಧ ಆವರಣಕ್ಕೂ ಕಾಲಿಟ್ಟಿದೆ. ವಿಧಾನಸೌಧ ಮುಂದೆ ಯುವಕರ ಗುಂಪೊಂದು ಹೊಡೆದಾಟ ನಡೆಸಿದೆ. ಗಲಾಟೆ, ಹಲ್ಲೆ ನೋಡಿ ಸ್ಥಳದಲ್ಲಿದ್ದ ಜನರು ಆತಂಕಗೊಂಡಿದ್ದಾರೆ. ಈ ಕುರಿತ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ನೇಪಾಳಿ ಯುವಕರ ಗುಂಪು ಹೊಡೆದಾಟ ನಡೆಸಿದೆ. ಹೊಡೆದಾಟದ ವೇಳೆ

ಪುಟ 2ಕ್ಕೆ

## ದರೋಡೆ ಸುಳಿವು ಪತ್ತೆ: ಪರಮೇಶ್ವರ್

**ಬೆಂಗಳೂರು:** ನಗರದಲ್ಲಿ ನಡೆದ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹತ್ವದ ಸುಳಿವು ಸಿಕ್ಕಿದೆ. ಆರೋಪಿಗಳನ್ನು ಶೀಘ್ರ ಬಂಧಿಸುತ್ತೇವೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಹೇಳಿದರು.



ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ಎಟಿಎಂಗಳಿಗೆ ಹಣ ಹಾಕುವ ಮಾಹಿತಿಯನ್ನು

ಪುಟ 2ಕ್ಕೆ

## ಮಾನವ-ಪ್ರಾಣಿ ಸಂಘರ್ಷ ತಡೆಗೆ ಚೈನ್ ಲಿಂಕ್ ಮೆಶ್ ಅಳವಡಿಕೆ

**ಮೈಸೂರು:** ಹೆಚ್ಚುತ್ತಿರುವ ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಅರಣ್ಯ ಇಲಾಖೆ ಅಧಿಕಾರಿಗಳು ಮೈಸೂರಿನ ಎಚ್.ಡಿ.ಕೋಟೆ ತಾಲ್ಲೂಕಿನ ನಾಗರಹೊಳೆ ಹುಲಿ ಮೀಸಲು ಪ್ರದೇಶದಲ್ಲಿ 13 ಕಿ.ಮೀ. ಚೈನ್ ಲಿಂಕ್ ಮೆಶ್ ಅಳವಡಿಸಲು ಮುಂದಾಗಿದ್ದಾರೆ.



ಯೋಜನೆಯು ಆರಂಭಿಕ ಹಂತದಲ್ಲಿದ್ದರೂ, ಜಾಲರಿ ಬೇಲಿ ಬಲವಾದ ಭೌತಿಕ ನಿರೋಧಕವಾಗಿ ಕಾರ್ಯನಿರ್ವಹಿಸುತ್ತದೆ. ಕಾಡು ಪ್ರಾಣಿಗಳು ಜನರು ಮತ್ತು ಜಾನುವಾರುಗಳ ಸಂಪರ್ಕಕ್ಕೆ ಬರದಂತೆ ತಡೆಯುತ್ತದೆ. ಈ ತಡೆಗೋಡೆಯನ್ನು ಪ್ರಸ್ತುತ ಪ್ರಾಯೋಗಿಕವಾಗಿ ನಿರ್ಮಿಸಲಾಗುತ್ತಿದೆ. ಈ ಪ್ರಯೋಗ ಯಶಸ್ವಿಯಾದರೆ, ಮತ್ತಷ್ಟು ವಿಸ್ತರಿಸಿ 10 ಅಡಿ ಎತ್ತರಕ್ಕೆ ಏರಿಸಿ ಅಳವಡಿಸಲಾಗುವುದು ಎಂದು

ಪುಟ 2ಕ್ಕೆ

## ಕನಕಪುರದಲ್ಲಿ 2ನೇ ಏರ್‌ಪೋರ್ಟ್ ನಿರ್ಮಾಣ: ಡಿಸಿಎಂ ಡಿ.ಕೆ.ಶಿವಕುಮಾರ್

**ಬೆಂಗಳೂರು:** ಬೆಂಗಳೂರಿನ ಮೂಲಸೌಕರ್ಯ ಸುಧಾರಿಸಲು ಮತ್ತು ಪ್ರಪಂಚದಾದ್ಯಂತ ಹೂಡಿಕೆಗಳನ್ನು ಆಕರ್ಷಿಸಲು ಹೆಚ್ಚಿನ ಪ್ರಯತ್ನಗಳು ನಡೆಯುತ್ತಿವೆ. ಜನರು ತಾಳ್ಮೆಯಿಂದಿದ್ದು ಅಭಿವೃದ್ಧಿಯಲ್ಲಿ ಸಹಕರಿಸಬೇಕೆಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬೆಂಗಳೂರಿನ ಎರಡನೇ ಏರ್ ಪೋರ್ಟ್ ಯಾವ ಸ್ಥಳದಲ್ಲಿ ನಿರ್ಮಾಣವಾಗಲಿದೆ ಎಂಬ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುಳಿವು ನೀಡಿದ್ದಾರೆ. ಬೆಂಗಳೂರಿನ ಎರಡನೇ ಏರ್ ಪೋರ್ಟ್ ಅನ್ನು ದಕ್ಷಿಣ ಭಾಗದ ಕನಕಪುರ ರಸ್ತೆಯ ಬಳಿ ನಿರ್ಮಿಸಲಾಗುತ್ತದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.



ಬೆಂಗಳೂರಿನಲ್ಲಿ ನಡೆಯುತ್ತಿರುವ ಟೆಕ್ ಸಮ್ಮಿಟ್‌ನಲ್ಲಿ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್, ಬೆಂಗಳೂರಿನ ದಕ್ಷಿಣ ಭಾಗದಲ್ಲಿ 2ನೇ ಏರ್ ಪೋರ್ಟ್ ನಿರ್ಮಿಸಲಾಗುತ್ತದೆ ಎಂದರು.

## ತುಮಕೂರಿಗೆ ಮೆಟ್ರೋದಿಂದ ಅನುಕೂಲ: ಜಿ.ಪರಮೇಶ್ವರ್

**ಬೆಂಗಳೂರು:** ಬೆಂಗಳೂರಿನಿಂದ ತುಮಕೂರಿಗೆ ನಮ್ಮ ಮೆಟ್ರೋ ರೈಲು ವಿಸ್ತರಣೆಯಿಂದ ತುಮಕೂರು ಭಾಗದ ಜನರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಯೋಜನೆಗೆ ಅಪಸ್ವರ ತೆಗೆದಿರುವ ತೇಜಸ್ವಿ ಸೂರ್ಯಗೆ ತಿರುಗೇಟು ನೀಡಿದರು.




ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಪರಮೇಶ್ವರ್ ಅವರು, ಬೆಂಗಳೂರು-ತುಮಕೂರು ಮೆಟ್ರೋ ಯೋಜನೆಯ ಅನೇಕ ವಿಚಾರಗಳು ಸಂಸದ ತೇಜಸ್ವಿಸೂರ್ಯಗೆ ತಿಳಿದಿಲ್ಲ. ಇದೇ ಕಾರಣದಿಂದ ಯೋಜನೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರತಿನಿತ್ಯ ತುಮಕೂರಿನಿಂದ ಸಾವಿರಾರು ಜನ ಪ್ರಯಾಣ ಮಾಡುತ್ತಾರೆ. ನೆಲಮಂಗಲ, ದಾಬಸ್‌ಪೇಟೆ, ಕ್ಯಾತ್ಸಂದ್ರ ಭಾಗ

ಪುಟ 2ಕ್ಕೆ

# ಇಂದು ನಿತೀಶ್ ಪ್ರಮಾಣ ವಚನ

## ಬಿಹಾರ ಮುಖ್ಯಮಂತ್ರಿ ಆಗಿ 10ನೇ ಬಾರಿಗೆ ಆಯ್ಕೆ



**ಪಾಟ್ನಾ:** ಬಿಹಾರ ರಾಜಧಾನಿ ಪಾಟ್ನಾದಲ್ಲಿ ಬುಧವಾರ ನಡೆದ ಜೆಡಿಯು ಶಾಸಕಾಂಗ ಪಕ್ಷದ ಸಭೆಯಲ್ಲಿ ಹೊಸದಾಗಿ ಆಯ್ಕೆಯಾದ ಶಾಸಕರು ಜೆಡಿ(ಯು) ಮುಖ್ಯಸ್ಥ ನಿತೀಶ್ ಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದರು.

ಎನ್‌ಡಿಎ ಸಭೆಗೂ ಮುಂಚಿತವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ರಾಜ್ಯ ಸಚಿವ ಶ್ರಾವಣ್ ಕುಮಾರ್ ಅವರು ಹೇಳಿದ್ದಾರೆ. ನಂತರ ನಿತೀಶ್ ಕುಮಾರ್ ಅವರನ್ನು ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡಲಾಗುತ್ತದೆ.

ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಭರ್ಜರಿ ಗೆಲುವು ಸಾಧಿಸಿದ್ದು, ಗುರುವಾರ ಪಾಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ನಿತೀಶ್ ಕುಮಾರ್ ಅವರು ದಾಖಲೆಯ 10ನೇ ಬಾರಿಗೆ ಬಿಹಾರ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. 243 ಸದಸ್ಯರ ವಿಧಾನಸಭೆಯಲ್ಲಿ ಎನ್‌ಡಿಎ 202 ಸ್ಥಾನಗಳನ್ನು ಗೆದ್ದುಕೊಂಡಿದೆ. ಇದರಲ್ಲಿ ಬಿಜೆಪಿ 89, ಜೆಡಿ(ಯು) 85, ಎಲ್‌ಜೆಪಿ (ಆರ್‌ವಿ) 19, ಎಚ್‌ಎಎಂ 5 ಮತ್ತು ಆರ್‌ಎಲ್‌ಎಂ 4 ಸ್ಥಾನಗಳನ್ನು ಗೆದ್ದುಕೊಂಡಿದೆ.

### ಬಿಜೆಪಿಯ ಇಬ್ಬರು ಡಿಸಿಎಂ

ಬಿಜೆಪಿ ತನ್ನ ಶಾಸಕಾಂಗ ಪಕ್ಷದ ನಾಯಕರಾಗಿ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ ಅವರನ್ನು ಆಯ್ಕೆ ಮಾಡಿದೆ. ಈ ಇಬ್ಬರು ನಿತೀಶ್ ಕುಮಾರ್ ನೇತೃತ್ವದ ನೂತನ ಎನ್ ಡಿಎ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸುತ್ತಾರೆ ಎನ್ನಲಾಗಿದೆ.

ಬಿಹಾರದ ಹೊಸ ಸಚಿವ ಸಂಪುಟದಲ್ಲಿ ಪ್ರಮುಖ ಖಾತೆಗಳನ್ನು ಪಡೆಯಲು ಎನ್‌ಡಿಎ ಮಿತ್ರಪಕ್ಷಗಳು ಕಳೆದ ಕೆಲವು ದಿನಗಳಿಂದ ಕಠಿಣ ಚೌಕಾಶಿಯಲ್ಲಿ ತೊಡಗಿವೆ. ಸ್ಪೀಕರ್ ಹುದ್ದೆ ಬಿಜೆಪಿ ಬಳಿಯೇ ಉಳಿಯುವ ನಿರೀಕ್ಷೆಯಿದೆ. ಆದರೆ ನಿತೀಶ್ ಕುಮಾರ್ ಅವರು ಗೃಹ ಖಾತೆಯನ್ನು ಉಳಿಸಿಕೊಳ್ಳುವ ಸಾಧ್ಯತೆಯಿದೆ. ಸ್ಪೀಕರ್ ಸ್ಥಾನಕ್ಕೆ ಇಬ್ಬರು ಪ್ರಮುಖ

ಪುಟ 2ಕ್ಕೆ

# ಶಬರಿಮಲೆಯಲ್ಲಿ ನಿರ್ವಹಣೆ ಸಮಸ್ಯೆ

## ಟಿಡಿಬಿ ಅಧಿಕಾರಿಗಳ ವಿರುದ್ಧ ಕೊಚ್ಚಿ ಹೈಕೋರ್ಟ್ ಚಾಟಿ

**ಕೊಚ್ಚಿ:** ಶಬರಿಮಲೆಯಲ್ಲಿ ಜನದಟ್ಟಣೆ ನಿಯಂತ್ರಿಸುವಲ್ಲಿ ವಿಫಲವಾಗಿರುವ ಅಧಿಕಾರಿಗಳನ್ನು ಕೇರಳ ಹೈಕೋರ್ಟ್ ಬುಧವಾರ ತೀವ್ರ ತರಾಟೆಗೆ ತೆಗೆದುಕೊಂಡಿದೆ. ಅಧಿಕಾರಿಗಳ ನಡುವಣ ಸಮನ್ವಯದ ಕೊರತೆಯಿಂದ ಪರಿಸ್ಥಿತಿ ನಿಯಂತ್ರಣ ತಪ್ಪಿದೆ ಎಂದು ಕೋರ್ಟ್ ಹೇಳಿದೆ.

'ಮಂಡಲ ಮಕರವಿಳಕ್ಕು' ಆರಂಭವಾಗಿರುವ ಬೆನ್ನಲ್ಲೇ ಶಬರಿಮಲೆಯಲ್ಲಿ ಭಕ್ತರ ಭಾರಿ ದಟ್ಟಣೆ ಕಂಡುಬಂದಿದೆ. ಅವ್ಯವಸ್ಥೆಯಿಂದಾಗಿ ಪರಿಸ್ಥಿತಿಯನ್ನು ನಿಭಾಯಿಸಲು ಹರಸಾಹಸಪಡಬೇಕಾಯಿತು. ತಿರುವಾಂಕೂರು ದೇವಸ್ಥಾನ ಆಡಳಿತ ಮಂಡಳಿಯು (ಟಿಡಿಬಿ) ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲು ವಿಫಲವಾಗಿದೆ. ಹಿಂದೆ ನೀಡಿರುವ ಸೂಚನೆಗಳನ್ನು ಏಕೆ ಪಾಲಿಸಿಲ್ಲ ಎಂದು ಹೈಕೋರ್ಟ್ ಪ್ರಶ್ನಿಸಿದೆ.

ಅಗತ್ಯ ಕಾಮಗಾರಿಯನ್ನು ಆರು ತಿಂಗಳ ಹಿಂದೆಯೇ ಪೂರ್ಣಗೊಳಿಸಬೇಕಿತ್ತು. ದೇವಾಲಯದ ಪ್ರವೇಶಕ್ಕೆ ಏಕಕಾಲದಲ್ಲಿ ಏಕೆ ಅವಕಾಶ ನೀಡಲಾಯಿತು ಎಂದು ಪ್ರಶ್ನಿಸಿದೆ. ಭಕ್ತಾದಿಗಳನ್ನು ಪ್ರತ್ಯೇಕ ವಲಯಗಳಲ್ಲಿ ವಿಂಗಡಿಸುವುದರಿಂದ ಜನದಟ್ಟಣೆಯನ್ನು ಉತ್ತಮವಾಗಿ ನಿರ್ವಹಿಸಬಹುದಾಗಿದೆ ಎಂದು ನ್ಯಾಯಾಲಯ ಸಲಹೆ ನೀಡಿದೆ.



ನವೆಂಬರ್ 17ರಂದು ದೇವಸ್ಥಾನ ಬಾಗಿಲು ತೆರೆದ 48 ಗಂಟೆಗಳಲ್ಲಿ ಎರಡು ಲಕ್ಷಕ್ಕೂ ಅಧಿಕ ಭಕ್ತರು ಆಗಮಿಸಿದ್ದರು. ಜನದಟ್ಟಣೆಯನ್ನು ನಿಯಂತ್ರಿಸಲು ಟಿಡಿಬಿ ಸಿಬ್ಬಂದಿ ಹಾಗೂ ಪೊಲೀಸರು ಹರಸಾಹಸಪಡಬೇಕಾಯಿತು. ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತ ಭಕ್ತರಿಗೆ ಕುಡಿಯಲು ನೀರು ಸಹ ಸಿಕ್ಕಿರಲಿಲ್ಲ. ಈ ಸಂದರ್ಭ ಕೋಯಿಕ್ಕೋಡ್ ಜಿಲ್ಲೆಯ ಕೊಯಿಲಾಂಡಿ ತಾಲ್ಲೂಕಿನ 58 ವರ್ಷದ ಮಹಿಳೆಯೊಬ್ಬರು ಕುಸಿದು ಬಿದ್ದು ಮೃತಪಟ್ಟಿದ್ದರು.

## ಮೊದಲ ಪುಟದಿಂದ

### ತುಮಕೂರಿಗೆ ಮೆಟ್ರೋದಿಂದ ಅನುಕೂಲ: ಜಿ.ಪರಮೇಶ್ವರ್

ವೇಗವಾಗಿ ಬೆಳೆಯುತ್ತಿವೆ. ಕೈಗಾರಿಕೆ ಉದ್ದೇಶದಿಂದ ಜನರ ಜೀವನ ಹೆಚ್ಚಾಗುತ್ತಿದೆ. ಬೆಂಗಳೂರಿನಲ್ಲಿ ಒತ್ತಡ ಜಾಸ್ತಿ ಇದೆ. ನೀರಿಗೆ ಕಷ್ಟ, ಓಡಾಡೋಕೆ ಟ್ರಾಫಿಕ್ ಸಮಸ್ಯೆ ಇದೆಲ್ಲ ನೋಡಿಕೊಂಡು ಆ ಕಡೆ ಜೀವನ ನಡೆಸುತ್ತಿದ್ದಾರೆ ಎಂದರು.

ಎರಡು ವರ್ಷದ ಹಿಂದೆಯೇ ತುಮಕೂರಿಗೆ ಮೆಟ್ರೋ ಯೋಜನೆ ತೆಗೆದುಕೊಂಡು ಹೋಗಬೇಕು ಎಂದು ಪ್ರಸ್ತಾಪ ಮಾಡಿದ್ದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫಿಸಿಬಲಿಟಿ ಸ್ಟಡಿ ಮಾಡುವುದಾಗಿ 2024ರ ಬಜೆಟ್‌ನಲ್ಲಿ ಘೋಷಿಸಿದ್ದರು. ಫಿಸಿಬಲಿಟಿ ವರದಿಯಲ್ಲಿ ತುಮಕೂರು ಮೆಟ್ರೋ ಯೋಜನೆ ಬಗ್ಗೆ ಪಾಸಿಟಿವ್ ಆಗಿ ವರದಿ ಕೊಟ್ಟಿದ್ದಾರೆ. ಎಲ್ಲರೊಂದಿಗೆ ಚರ್ಚೆ ಮಾಡಿ ಡಿಪಿಆರ್ ಮಾಡಲು ಅನುಮತಿ ಕೊಟ್ಟಿದ್ದಾರೆ ಎಂದು ಪರಮೇಶ್ವರ್ ತಿಳಿಸಿದರು.

### ನನ್ನ ಮನವಿಗೆ ಕೇಂದ್ರದ ಸ್ಪಂದನೆ

ಅಗತ್ಯತೆಯ ಬಗ್ಗೆ ಸಿಎಂ ಮತ್ತು ನನ್ನ ಮುಂದೆ ಬೇಡಿಕೆ ಇಟ್ಟಿವೆ. ಕಳೆದ ಬಾರಿ ಬೆಲೆ ಏರಿಕೆಯಾಗಿ ಏಳೆಂಟು ವರ್ಷಗಳಾಗಿವೆ. ಆದ್ದರಿಂದ ನಾವು ಪ್ರಧಾನಿಗೆ ಈ ಬಗ್ಗೆ ವಿನಂತಿಸಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.

ರೈತರು ಮತ್ತು ಕಾರ್ಖಾನೆಗಳು ಇಬ್ಬರೂ ಪ್ರಯೋಜನ ಪಡೆಯಬೇಕು. ಕಾರ್ಖಾನೆಗಳು ಇದ್ದರೆ, ರೈತರು ಇರುತ್ತಾರೆ ಮತ್ತು ಅದೇ ರೀತಿ, ರೈತರು ಇದ್ದರೆ, ಕಾರ್ಖಾನೆಗಳು ಇರುತ್ತವೆ. ಆದ್ದರಿಂದ ನಮ್ಮ ಕಡೆಯಿಂದಲೂ ಸಕ್ಕರೆ ಬೆಲೆಯನ್ನು ಹೆಚ್ಚಿಸಬೇಕೆಂಬ ಬೇಡಿಕೆ ಇತ್ತು. ಏಕೆಂದರೆ ಕೇಂದ್ರವು ಕಾರ್ಖಾನೆಗಳು ಎತ್ತಿರುವ ಸಮಸ್ಯೆಗಳಾದ ಕಬ್ಬು, ಕಾಕಂಬಿ, ವಿದ್ಯುತ್, ಬ್ಯಾಂಕ್‌ಗಳಿಂದ ಬಡ್ಡಿದರವನ್ನು ಆಧರಿಸಿ ನಿರ್ಧರಿಸುತ್ತದೆ. ನ್ಯಾಯ ಒದಗಿಸುವಂತೆ ನಾವು ಕೇಂದ್ರವನ್ನು ವಿನಂತಿಸಿದ್ದೆವು' ಎಂದು ಅವರು ಹೇಳಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಹೇಳಿಕೆಗೆ ಸಂತೋಷ ವ್ಯಕ್ತಪಡಿಸಿದ ಅವರು, ಜೋಶಿ ಕೂಡ ಪರಿಸ್ಥಿತಿ ಅರ್ಥಮಾಡಿಕೊಂಡಿದ್ದಾರೆ ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದ್ದರು.

### 7 ಜನರ ಗ್ಯಾಂಗ್‌ನಿಂದ ದಾಳಿ

ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ನಕಲಿ ನಂಬರ್ ಪ್ಲೇಟ್: ದರೋಡೆಕೋರರು ಬಳಸಿದ ಇನೋವಾ ಕಾರಿನ ನಂಬರ್ ಪ್ಲೇಟ್ ನಕಲಿ ಎಂದು ಪೊಲೀಸ್ ತನಿಖೆಯಲ್ಲಿ ತಿಳಿದುಬಂದಿದೆ. ವಾಸ್ತವವಾಗಿ ಕೆಎ 03 ಎನ್‌ಸಿ 8052 ಸಂಖ್ಯೆಯು ಸ್ವಿಫ್ಟ್ ಕಾರಿನದ್ದಾಗಿದೆ. ಕಳ್ಳತನಕ್ಕೆಂದು ಆ ನಂಬರ್ ಪ್ಲೇಟ್ ಬಳಸಿದ್ದಾರೆ.

### 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರದ ಅನುಮತಿ

40 ರೂಪಾಯಿಗೆ ಹೆಚ್ಚಿಸುವಂತೆ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಒಕ್ಕೂಟ ಸರ್ಕಾರಕ್ಕೆ ಮನವಿ ಮಾಡಿದೆ.

### ವಿಧಾನಸೌಧದ ಮುಂದೆ ಯುವಕರ ಹೊಡೆದಾಟ

ಯುವಕರ ಗುಂಪು ಹೆಲ್ಮೆಟ್ ಸೇರಿದಂತೆ ಕೈಗೆ ಸಿಕ್ಕ ಸಿಕ್ಕ ವಸ್ತುಗಳನ್ನು ಎಸೆದಾಡಿದ್ದಾರೆ. ಈ ವೇಳೆ ಸ್ಥಳಕ್ಕೆ ಬಂದ ಪೊಲೀಸರು ಯುವಕರಿಗೆ ಲಾಟಿ ರುಚಿ ತೋರಿಸಿದ್ದಾರೆ. ಗಲಾಟೆಗೆ ಕಾರಣ ಏನು? ಸ್ಥಳದಲ್ಲಿದ್ದ ಯುವಕರು ಯಾರು? ಎಲ್ಲಿಂದ ಬಂದಿದ್ದಾರೆ ಎಂಬ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ.

### ಇಂದು ನಿತೀಶ್ ಪ್ರಮಾಣ ವಚನ

ಬಿಜೆಪಿ ನಾಯಕರ ಹೆಸರುಗಳನ್ನು ಈಗಾಗಲೇ ಪರಿಗಣಿಸಲಾಗಿದ್ದು, ಅವರಲ್ಲಿ ಒಬ್ಬರನ್ನು ಇಂದು ಪಾಟ್ನಾದಲ್ಲಿ ನಡೆಯಲಿರುವ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಂತಿಮಗೊಳಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

### ದರ್ಶನ್‌ಗೆ ಹೆಚ್ಚುವರಿ ಕಂಬಳಿ ನೀಡಲು ಕೋರ್ಟ್ ಆದೇಶ

ಅಧಿಕೃತವಾಗಿ ಸಾಕ್ಷ್ಯವಾಗಿ ದಾಖಲಿಸಬೇಕೆಂಬ ಪ್ರಾಸಿಕ್ಯೂಷನ್‌ನ ಮನವಿಯನ್ನು ನ್ಯಾಯಾಲಯ ಪರಿಗಣಿಸಿತು. ಆದರೆ, ದರ್ಶನ್ ಅವರ ವಕೀಲರು ಈ ಮನವಿಗೆ ಆಕ್ಷೇಪ ವ್ಯಕ್ತಪಡಿಸಿದರು. ಬಳಿಕ ನ್ಯಾಯಾಲಯ ವಿಚಾರಣೆ ಮುಂದೂಡಿತು. ಈ ಹಂತದಲ್ಲಿ, ಪ್ರಕರಣದ ಮತ್ತೊಬ್ಬ ಆರೋಪಿ ನಾಗರಾಜ್, ಚಳಿ ಇದ್ದರೂ ಕೈದಿಗಳಿಗೆ ಕಂಬಳಿಗಳನ್ನು ನೀಡುತ್ತಿಲ್ಲ. ವಿಪರೀತ ಚಳಿಯಿಂದಾಗಿ ನಮಗೆ ನಿದ್ರೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ದರ್ಶನ್ ಅಭಿಮಾನಿ ರೇಣುಕಸ್ವಾಮಿಯನ್ನು ಜೂನ್ 8, 2024ರಂದು ಬೆಂಗಳೂರಿನಲ್ಲಿ ಕೊಲೆ ಮಾಡಲಾಗಿತ್ತು. ರೇಣುಕಸ್ವಾಮಿಯನ್ನು ಚಿತ್ರದುರ್ಗದಿಂದ ಅಪಹರಿಸಿ ಬೆಂಗಳೂರಿಗೆ ಕರೆದುತಂದು ಒಂದು ಶೆಡ್‌ನಲ್ಲಿ ಇರಿಸಿ, ಚಿತ್ರಹಿಂಸೆ ನೀಡಿ ಕೊಲ್ಲಲಾಗಿತ್ತು.

### ಜೈಲ್ ವಿಡಿಯೋ ವೈರಲ್ ಹಿಂದೆ ವಿಜಯಲಕ್ಷ್ಮೀ ಭಾಗಿ?

ಏನು ಗೊತ್ತಿಲ್ಲ ಎನ್ನುತ್ತಿದ್ದ ಧನ್ವೀರ್ ಈಗ ದರ್ಶನ್ ಪತ್ನಿ ವಿಜಯಲಕ್ಷ್ಮೀ ಹೆಸರನ್ನು ಹೇಳಿದ್ದಾರೆ. ವಿಜಯಲಕ್ಷ್ಮಿ ಅವರಿಗೆ ವಿಡಿಯೋ ಕಳುಹಿಸಿದ್ದೆ. ಆನಂತರ ಏನಾಯಿತು ಎಂದು ಗೊತ್ತಾಗಿಲ್ಲ ಎಂದು ತಿಳಿಸಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣದಲ್ಲಿ ವಿಜಯಲಕ್ಷ್ಮೀ ಅವರನ್ನು ತನಿಖೆಗೆ ಕರೆಯುವ ಸಾಧ್ಯತೆ ಇದೆ.

### ಮಾನವ–ಪ್ರಾಣಿ ಸಂಘರ್ಷ ತಡೆಗೆ ಚೈನ್ ಲಿಂಕ್ ಮೆಶ್ ಅಳವಡಿಕೆ

ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಇದು ಸಂಘರ್ಷ ನಿರ್ವಹಣಾ ತಂತ್ರದ ಭಾಗವಾಗಿದ್ದು. ಈ ಪ್ರಾಯೋಗಿಕ ಹಂತವು ತಡೆಗೋಡೆಯ ಕುರಿತು ಭವಿಷ್ಯದ ನಿರ್ಧಾರಗಳನ್ನು ಮಾರ್ಗದರ್ಶನ ನೀಡುತ್ತದೆ ಎಂದು ಆರ್‌ಎಫ್‌ಒ ಸಿದ್ದರಾಜು ತಿಳಿಸಿದರು.

ಚೈನ್–ಲಿಂಕ್ ಮೆಶ್ ಅಳವಡಿಕೆ ಸಮಾರಂಭದಲ್ಲಿ ಭಾಗವಹಿಸಿದ್ದ ಎಚ್‌ಡಿ ಕೋಟೆ ಶಾಸಕ ಅನಿಲ್ ಚಿಕ್ಕಮಾದು, ಈ ಕ್ರಮವು ಮನುಷ್ಯ–ಪ್ರಾಣಿ ಸಂಘರ್ಷವನ್ನು ಪರಿಹರಿಸಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು.

### ದರೋಡೆ ಸುಳಿವು ಪತ್ತೆ:

ಆರೋಪಿಗಳಿಗೆ ನೀಡಲಾಗಿದೆ. ಇದಕ್ಕೆ ಕಾರಣೀಕರ್ತರು ಯಾರು? ಹಣ ಹಾಕುವವರಲ್ಲಿ ಇರುವ ಕುರಿತು ಮಾಹಿತಿ ಸಿಕ್ಕಿದೆ. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ ಎಂದರು. ಬೆಂಗಳೂರಿನಲ್ಲಿ ಹಾಡುಹಗಲೇ ಇಂತಹ ಘಟನೆ ನಡೆದಿರಲಿಲ್ಲ. 7 ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಹಣ ದರೋಡೆ ಮಾಡಲಾಗಿದೆ. ವಾಹನಗಳ ನಂಬರ್ ಸಿಕ್ಕಿದೆ. ಕೃತ್ಯ ಎಸಗಿದವರು ಇಲ್ಲಿಯವರಾ? ಹೊರ ರಾಜ್ಯದಲ್ಲಿಯವರಾ ತನಿಖೆ ನಡೆಯುತ್ತಿದೆ. ತನಿಖೆಯ ದೃಷ್ಟಿಯಿಂದ ಎಲ್ಲ ಮಾಹಿತಿ ಹಂಚಿಕೊಳ್ಳಲಾಗುವುದಿಲ್ಲ ಎಂದು ಹೇಳಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನಾಳೆಯಿಂದ ಜೆಡಿಎಸ್ ಬೆಳ್ಳಿಹಬ್ಬ

## ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್, ಶಾಸಕ ಹರೀಶ್ ಗೌಡ ಜಂಟಿ ಸುದ್ದಿಗೋಷ್ಠಿ



ಮೈಸೂರು: ಜನತಾ ದಳ(ಜಾತ್ಯಾತೀತ) ಪಕ್ಷ ಸ್ಥಾಪನೆಯಾಗಿ 25 ವರ್ಷವಾಗಿದ್ದು, ಈ ಹಿನ್ನೆಲೆಯಲ್ಲಿ ನ.21, 22ರಂದು ಮೈಸೂರು ಮತ್ತು ಬೆಂಗಳೂರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಜೆಡಿಎಸ್ ಕಾರ್ಯಾಧ್ಯಕ್ಷರೂ ಆದ ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರಿಗೆ ಅಧಿಕಾರ ಸಿಕ್ಕಿದ್ದು ಕಡಿಮೆ. ಆದರೆ ಜೀವಮಾನ ಪೂರ್ತಿ ಹೋರಾಟ ಮಾಡಿಕೊಂಡು ಬಂದರು. ಅವರು ಕಟ್ಟಿದ ಪ್ರಾದೇಶಿಕ ಪಕ್ಷ ಇದೀಗ 25 ವರ್ಷ ಪೂರೈಸಿದೆ. ಈ ಹಿನ್ನೆಲೆಯಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಾದೇಶಿಕ ಪಕ್ಷದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದನ್ನು ಮನಗಂಡು ಎಚ್.ಡಿ.ದೇವೇಗೌಡ ಅವರು ಜೆಡಿಎಸ್ ಕಟ್ಟಿ ಬೆಳೆಸಿದರು. ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದಿದ್ದು, ಎರಡು ಬಾರಿ ಮುಖ್ಯಮಂತ್ರಿಯಾಗಿ ಜನಸೇವೆ ಮಾಡಿದ್ದಾರೆ. ಕುಮಾರಸ್ವಾಮಿ ಅವರು ಕೇಂದ್ರ ಸರ್ಕಾರದಲ್ಲಿ ಜವಾಬ್ದಾರಿ ವಹಿಸಿಕೊಂಡ ಬಳಿಕ ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷ ಸಂಘಟನೆ ಮಾಡುತ್ತಿದ್ದಾರೆ.

ಜೆಡಿಎಸ್ ಪಕ್ಷ, ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಅವರ ಸಾಧನೆಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ನ.21ರಂದು ಆಸ್ಪತ್ರೆಗಳ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ಪ್ರಮುಖ ರಸ್ತೆ ಮತ್ತು ವೃತ್ತಗಳಿಗೆ ಫ್ಲೆಕ್ಸ್, ಬಂಟಿಂಗ್ಸ್ ಅಳವಡಿಕೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ನ.22ರಂದು ಬೆಂಗಳೂರಿನ ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ.ಭವನದಲ್ಲಿ ಬೆಳ್ಳಿ ಹಬ್ಬ ಕಾರ್ಯಕ್ರಮ ಆಯೋಜಿಸಲಾಗಿದ್ದು, ಮೈಸೂರು ನಗರ ಮತ್ತು ಜಿಲ್ಲೆಯ ಪ್ರಮುಖ ನಾಯಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಂದೂ ಕೂಡ ಕಾರ್ಯಕರ್ತರು ಸ್ಥಳೀಯ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು. ಜೆಡಿಎಸ್ ಪಕ್ಷದ ಬಗ್ಗೆ ಕೆಲವರು ಏನೇನೋ ಹೇಳುತ್ತಿದ್ದರು. ಜೆಡಿಎಸ್ ಎರಡಂಕಿ ದಾಟಲ್ಲ ಎಂದು ಟೀಕೆ–ಟಿಪ್ಪಣಿ ಮಾಡುತ್ತಿದ್ದರು. ಇತ್ತೀಚೆಗೆ ಬಿಹಾರದಲ್ಲಿ ನಡೆದ ಚುನಾವಣೆಯಲ್ಲಿ ಅವರದ್ದೇ ಪಕ್ಷ ಒಂದಂಕಿಗೆ ಇಳಿದಿದೆ. ಪ್ರಾದೇಶಿಕ ಪಕ್ಷದ ಅಸ್ತಿತ್ವದ ಬಗ್ಗೆ ಮಾತನಾಡುವ ಮುನ್ನ ತಮ್ಮ ಪಕ್ಷದ ಬಗ್ಗೆಯೂ ಸ್ವಲ್ಪ ಯೋಚಿಸಲಿ ಎಂದು ತಿರುಗೇಟು ನೀಡಿದರು. ಜೆಡಿಎಸ್ ಪಕ್ಷದ ಸಂಘಟನಾತ್ಮಕ ಶಕ್ತಿಗೆ ಇನ್ನಷ್ಟು ಬಲ ತುಂಬುವ ಉದ್ದೇಶದಿಂದ ಶೀರ್ಘದಲ್ಲೇ ರಾಜ್ಯ ಹಾಗೂ ಜಿಲ್ಲಾಮಟ್ಟದ ಸಮಿತಿಗಳನ್ನು ಪುನಾರಚನೆ ಮಾಡಲಾಗುವುದು. ಬೆಳ್ಳಿ ಹಬ್ಬ ಕಾರ್ಯಕ್ರಮ ಮುಗಿದ ಬಳಿಕ ಅಧಿಕೃತವಾಗಿ ಮಾಹಿತಿ ನೀಡಲಾಗುವುದು.

ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನ ಪರಿಷತ್ತು ಸದಸ್ಯರಾದ ಕೆ.ವಿವೇಕಾನಂದ, ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಅಶ್ವಿನ್ ಕುಮಾರ್, ಮುಖಂಡರಾದ ಎಸ್.ಬಿ.ಎಂ.ಮಂಜು, ಸೋಮು, ರವಿಕುಮಾರ್(ಚಿನ್ನಿ ರವಿ), ರವಿಚಂದ್ರೇಗೌಡ, ಆರ್.ಲಿಂಗಪ್ಪ, ಗಂಗಾಧರ್ ಗೌಡ ಮುಂತಾದವರಿದ್ದರು.

### ಜಿಟಿಡಿ ಬರುತ್ತಾರೆ ಅನ್ಸುತ್ತೆ: ಸಾರಾ

ಮೈಸೂರು: 21ನೇ ತಾರೀಖು ಮೈಸೂರಿನಲ್ಲಿ ನಾವು ಕಾರ್ಯಕ್ರಮ ಮಾಡುತ್ತೇವೆ. ಜಿಟಿ ದೇವೇಗೌಡರು ಕಾರ್ಯಕ್ರಮಕ್ಕೆ ಬರುತ್ತಾರೆ ಅನಿಸುತ್ತೆ. ಸಹಕಾರಿ ಸಪ್ತಾಹ ಕಾರ್ಯಕ್ರಮ ನಡೆಯುತ್ತಿದೆ. ಅವರು ಆ ಕಾರ್ಯಕ್ರಮದಲ್ಲಿ ಬ್ಯುಸಿ ಇದ್ದಾರೆ. ಜೆಡಿಎಸ್ ಬೆಳ್ಳಿಹಬ್ಬದ ಜೊತೆಗೆ ಸ್ಥಳೀಯ ಚುನಾವಣೆಗೂ ಸಹ ಸಜ್ಜಾಗಬೇಕು. ಈ ನಿಟ್ಟಿನಲ್ಲಿ ಕಾರ್ಯಕರ್ತರಿಗೆ ಹುರುಪು ತುಂಬುತ್ತೇವೆ ಎಂದು ಸಾ.ರಾ.ಮಹೇಶ್

### ಗ್ರಾಮ ಮಟ್ಟದಲ್ಲಿ ಬೆಳ್ಳಿಹಬ್ಬ ಆಚರಣೆ

ಮೈಸೂರು: ಜೆಡಿಎಸ್ ಪಕ್ಷದ ಬೆಳ್ಳಿ ಹಬ್ಬವನ್ನು ಹಳ್ಳಿ ಹಾಗೂ ವಾರ್ಡ್ ಮಟ್ಟದಲ್ಲಿ ಆಚರಿಸಲಾಗುವುದು ಎಂದು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಹೇಳಿದರು.

ಜೆಡಿಎಸ್ ಪಕ್ಷವು ತೆನೆ ಹೊತ್ತ ಮಹಿಳೆ ಚಿಹ್ನೆಯನ್ನು ಅಳವಡಿಸಿಕೊಂಡು 25 ವರ್ಷವಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಕಡೆ ಬೆಳ್ಳಿ ಹಬ್ಬ ಆಚರಿಸುವಂತೆ ವರಿಷ್ಠರು ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಹಳ್ಳಿ–ಹಳ್ಳಿಗಳಲ್ಲಿ, ನಗರ ಪ್ರದೇಶದ ವಾರ್ಡ್ ಹಂತದಲ್ಲಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಕಾರ್ಯಕರ್ತರು ಉತ್ಸಾಹದಿಂದ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

# ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಸಹಿ ಸಂಗ್ರಹ




ಎಚ್.ಡಿ.ಕೋಟೆ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲ್ಲ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಹಾಗೂ ನೇಮಕಾ–ತಿಯಲ್ಲಿನ ಅಕ್ರಮ ತಡೆಗೆ ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ದೇಶ ವ್ಯಾಪಿ ನಡೆಸುತ್ತಿರುವ ಅಭಿಯಾನ ಬೆಂಬಲಿಸಿ ಪಟ್ಟಣದ ಪುರಸಭೆ ಮುಂಭಾಗ ಜಿಲ್ಲಾ ಸಮಿತಿಯು ಸಹಿ ಸಂಗ್ರಹ ಅಭಿಯಾನ ನಡೆಸಿತು.

ಸರ್ಕಾರದ ಜಿಲ್ಲಾ ಸಮಿತಿಯ ಅಧ್ಯಕ್ಷ ಟಿ.ಆರ್. ಸುನಿಲ್ ಮಾತನಾಡಿ, 'ದೇಶದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ ಭಯನಕ ರೂಪವನ್ನು ಪಡೆದು ಕೊಂಡಿದೆ. ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿ 9.78 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ, ರಾಜ್ಯ ಸರ್ಕಾರದ ಇಲಾಖೆಗಳಲ್ಲೂ 2.85 ಲಕ್ಷ ಹುದ್ದೆ ಖಾಲಿ ಇವೆ' ಎಂದರು.

2014ರಲ್ಲಿ ಬಿಜೆಪಿ ಪ್ರತಿ ವರ್ಷ ಮಾಡಿಲ್ಲ. ಯುವಜನರಿಗೆ 2 ಕೋಟಿ ಉದ್ಯೋಗ ಒದಗಿಸುವುದಾಗಿ ಭರವಸೆ ನೀಡಿತ್ತು. 12 ವರ್ಷ ಕಳೆದರೂ ಲಕ್ಷಗಟ್ಟಲೇ ಹುದ್ದೆಗಳನ್ನು ಭರ್ತಿ ರಾಜ್ಯದಲ್ಲೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ 1 ಲಕ್ಷ ಹುದ್ದೆ ಭರ್ತಿ ಮಾಡಲು ಭರವಸೆ ನೀಡಿದ್ದರೂ ಇದುವರೆಗೆ ನೇಮ ಕಾತಿ ಮಾಡಲು ಮುಂದಾಗಿಲ್ಲ' ಎಂದರು. ಭ್ರಷ್ಟಾಚಾರ, ಪ್ರಶ್ನೆಪತ್ರಿಕೆ ಸೋರಿಕೆ, ಸರ್ಕಾರಿ ಇಲಾಖೆಗಳ ಖಾಸಗೀಕರಣವು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ. ಜನರ ಹೆಚ್ಚುತ್ತಿರುವ ಅಗತ್ಯಗಳನ್ನು ಗಣನೆಗೆ ತೆಗೆದುಕೊಂಡು,

ಪ್ರತಿಯೊಬ್ಬರಿ ಗೂ ಅವರವರ ಶಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಉದ್ಯೋಗ ಒದಗಿ–ಸಬೇಕಿರುವುದು ಸರ್ಕಾರದ ಕರ್ತವ್ಯ' ಎಂದು ಹೇಳಿದರು. ಕಾರ್ಯದರ್ಶಿ ಎಸ್. ಸುಮ, ಜಂಟಿ ಕಾರ್ಯದರ್ಶಿ ನೀತುಶ್ರೀ, ಜಿಲ್ಲಾ ಸಮಿತಿಯ ಸದಸ್ಯರಾದ ರಣಜಿತ್, ಪೂರ್ಣಿಮಾ ಇದ್ದರು,

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು ಮತ್ತು ಹೊಸ ಉದ್ಯೋಗಗಳನ್ನು ಸೃಷ್ಟಿಸಬೇಕು.
- ಎಲ್ಲ ನೇಮಕಾತಿಗಳ ವಯೋಮಿತಿಯಲ್ಲಿ ಕನಿಷ್ಠ 5 ವರ್ಷಗಳ ಸಡಿಲಿಕೆ ನೀಡಬೇಕು.
- ಎಲ್ಲಾ ರೀತಿಯ ನೇಮಕಾತಿ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಇರಬೇಕು. ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಬೇಕು.
- ಕೆಪಿಎಸ್‌ಸಿಯಲ್ಲಿನ ಅಕ್ರಮ ತಡೆಗಟ್ಟಲು ರಾಜ್ಯ ಸರ್ಕಾರ ಹೋಟಾ ಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು.
- ಗುತ್ತಿಗೆ ವ್ಯವಸ್ಥೆಯನ್ನು ರದ್ದುಗೊಳಿಸಬೇಕು ಮತ್ತು ಎಲ್ಲಾ ಹುದ್ದೆಗಳಿಗೂ ಖಾಯಂ ನೇಮಕಾತಿ ಮಾಡಬೇಕು.
- ದೇಶಾದ್ಯಂತ ಗಿಗ್ ಕಾರ್ಮಿಕರಿಗೆ ಕಾರ್ಮಿಕರೆಂದು ಪರಿಗಣಿಸಿ ಮತ್ತು ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಬೇಕು.
- ಉದ್ಯೋಗಾವಕಾಶ ದೊರೆಯುವವರೆಗೆ ಗೌರವಾನ್ವಿತ ಜೀವನ ನಡೆಸಲು ಸೂಕ್ತವಾದ ನಿರುದ್ಯೋಗ ಭತ್ಯೆ ನೀಡಬೇಕು.
- ಸರ್ಕಾರಿ ಸಂಸ್ಥೆಗಳ ಖಾಸಗೀಕರಣ ನೀತಿಯನ್ನು ರದ್ದುಗೊಳಿಸಬೇಕು.
- ನೇಮಕಾತಿಗಳಲ್ಲಿ ದುಬಾರಿ ಪರೀಕ್ಷಾ ಶುಲ್ಕ ಕೈಬಿಡಬೇಕು ಹಾಗೂ ಪರೀಕ್ಷಾರ್ಥಿಗಳಿಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು.

ಪುರುಷೋತ್ತಮ್ ಬಿಳಿಮಲೆ

# ಮಂಟೇಸ್ವಾಮಿ ಪ್ರಾಧಿಕಾರ ರಚನೆಯಾಗಲಿ



ಮೈಸೂರು: ಜಾನಪದ ಕಲೆಗಳ ಕೇಂದ್ರಿಕೃತವಾದ ಆರ್ಕೈ ನಿರ್ಮಿಸಿವುದು ಇಂದಿನ ಅಗತ್ಯವಾಗಿದೆ. ಜೊತೆಗೆ ಮಂಟೇಸ್ವಾಮಿ ಪರಂಪರೆ ಹಾಡು ಜಾಗತಿಕವಾಗಿ ಮನ್ನಣೆ ಪಡೆಯುತ್ತಿದ್ದು, ಮಂಟೇಸ್ವಾಮಿ ಪ್ರಾಧಿಕಾರ ರಚನೆ ಯಾಗಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ ಹೇಳಿದರು.

ನಗರದ ಮಾನಸ ಗಂಗೋತ್ರಿಯ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಮಂಗಳವಾರ ಮೈಸೂರು ವಿವಿ ಪ್ರಸಾರಾಂಗದಲ್ಲಿ ವತಿಯಿಂದ ನಡೆದ 'ಧರೆಗೆ ದೊಡ್ಡವರ ಕಾವ್ಯದ ಏಳು ಪಠ್ಯಗಳು' ಮತ್ತು 'ನಾವು ಕೂಗುವಾ ಕೂಗು' ಕೃತಿಗಳ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ನಾಡಿನ ಜನಪದ ಕಲೆಗಳ ಸಮಗ್ರ ಸಂಗ್ರಹವಾದ ಕೇಂದ್ರಿಕೃತ ಆರ್ಕೈ ನಿರ್ಮಾಣ ಮಾಡಬೇಕಿದೆ. ಇದರಲ್ಲಿ ಕಲಾವಿದರ ಕಲೆ, ಬದುಕು, ಜೀವನವನ್ನು ತಿಳಿಸಬೇಕು. ಆಯಾ ಕಲಾವಿದರ ಹೆಸರನ್ನು ಸರ್ಚ್ ಮಾಡಿದಾಗ ತಕ್ಷಣ ಆತನ ಬದುಕು ಮತ್ತು ಕಲೆಯನ್ನು ತಿಳಿಸಿಸುವ ಕೆಲಸವಾಗಬೇಕು ಎಂದರು.

ಇಂದಿನ ಪೀಳಿಗೆ ಅಂತರ್ಜಲದ ಬಳಕೆ ಹೆಚ್ಚು ಮಾಡಲಿದೆ. ಈ ನಿಟ್ಟಿನಲ್ಲಿ ನಾವು ಡಿಜಟಿಲೀಕರಣ ಮಾಡಿದರೆ ಪೀಳಿಗೆಗೆಯಿಂದ ಪೀಳಿಗೆ ತಲುಪಿಸಬಹುದು. ಪುಸ್ತಕಗಳ ದಾಖಲು ಮಾಡುವ ಜೊತೆಗೆ ಟಿಜಿಟಲೀಕರಣ ಕೂಡ ಮಾಡಬೇಕು. ಜಾನಪದ ವಿಶ್ವವಿದ್ಯಾನಿಲಯ, ಪ್ರಸಾರಾಂಗದಿಂದ ಈ ಕೆಲಸವಾ ಗಬೇಕು. ಆರ್ಕೈ ನಿರ್ಮಿಸುವ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. 70–80ರ ದಶಕದಲ್ಲಿ ಜಾನಪದ ವಿಶ್ವವಿದ್ಯಾನಿಲಯದ ಬಹಳ ಸದ್ದು ವಾಡುತ್ತಿತ್ತು. ಆದರೆ, ಈಗ ಅನುದಾನದ ಕೊರತೆ ಇತರೆ ಸಮಸ್ಯೆಗಳಿಂದ ಪೂರಕ ಕೆಲಸಗಳನ್ನು ವಾಡಲಾ ಗುತ್ತಿಲ್ಲ. ನಾನು ಈಗ ಕೂಡ ವ್ಯವಸ್ಥೆ ಬಗೆಗಿನ ಲೋಪಗಳನ್ನು ಹೇಳಲಾಗದು ಎಂದು ಹೇಳಿದರು.

ಯಕ್ಷಗಾನ ಮತ್ತು ಭೂತರಾಧನೆ ಬಹಳ ದೊಡ್ಡ ಕಲೆಗಳು. ಪ್ರಸ್ತುತ ಸಂದರ್ಭದಲ್ಲಿ ಮುಂದಿನ 28 ವರ್ಷಗಳಿಗೆ ಆಟವೂ ಬುಕ್ ಆಗಿದ್ದು, ಅಷ್ಟೊಂದು ಜನಪ್ರಿಯತೆ ಪಡೆದುಕೊಂಡಿದೆ. ಒಟ್ಟಾರೆ 750 ಭೂತಗಳಿದ್ದು, ಈ ಭೂತ ಕಥನಾಗಳ ಕಾವ್ಯವೂ ಇದೆ. ಆದರೆ, ಪ್ರತಿಯೊಂದು ಭೂತಕ್ಕೂ ಒಬ್ಬೊಬ್ಬರು ಕಲಾವಿದ್ದಾರೆ. ಭೂತಾರಾಧನೆ?ಂ ಕಲಾವಿದನ ಆತ್ಮಚರಿತ್ರೆ?ಂ ಕಾದಂಬರಿ?ಂಗಿ ಅಥವಾ ಕೃತಿಯಾಗಿ ಪ್ರಕಟವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ತನ್ನ ಹತ್ತನೆ ವಯಸ್ಸಿಗೆ ಕಲಾವಿದನೊಬ್ಬ ಯಕ್ಷಗಾನ ಕಲೆಯನ್ನು ಕಲೆಯಲು ಆರಂಭಿಸುತ್ತಾರೆ. ಯಕ್ಷಗಾನಕ್ಕಾಗಿ ಕಲಾವಿದರು ತಮ್ಮ ಬದುಕಿನ 60–70 ವರ್ಷಗಳನ್ನು ಮುಡಿಪಾಗಿಡುತ್ತಾರೆ. ಆದರೆ, ಕಲಾವಿದರ ಜೀವನದ ಕುರಿತು ಯಾರೊಬ್ಬರು ಇಲ್ಲಿಯವರೆಗೂ ಕೃತಿಗಳನ್ನು ಬರೆದಿಲ್ಲ. ಕಲಾವಿದರ ಬದುಕಿಗೆ ಜಾನಪದ ವಿದ್ವಂಸರು ಅಕ್ಷರ ರೂಪದಲ್ಲಿ ಧನಿಯಾಗಬೇಕು. ಅಕ್ಷರವಾಗುವ ಪ್ರಕ್ರಿಯೆಯೂ ಕರ್ನಾಟಕದಲ್ಲಿ ಇಲ್ಲವಾಗಿದೆ. ನಾನು ಹೇಳಿದ ಮೇಲೆ ಏಳೆಂಟು ಪುಸ್ತಕಗಳು ಬಂದಿವೆ. ಆದರೆ, ಈ ಕಾರ್ಯ ಹೆಚ್ಚೆಚ್ಚು ನಡೆಯಬೇಕು ಎಂದರು.

ಕಪ್ಪಡಿ ಕ್ಷೇತ್ರದ ಶ್ರೀಕಂಠಸಿದ್ದಲಿಂಗರಾಜೇ ಅರಸ್ ಮಾತನಾಡಿ, ನಮ್ಮಪರಂಪರೆ?ಂನ್ನು ನೀಲಗಾರರು ಉಳಿಸಿಕೊಂಡು ಬಂದಿದ್ದು, ಆರು ಶತವಾನದ ಪರಂಪರೆಯ ಬಗ್ಗೆ ಆಳವಾದ ಸಂಶೋಧನೆ ನಡೆ?ಂಬೇಕು. ಸಂಶೋಧಕರು, ವಿದ್ವಾಂಸರಿಗೆ ವೇದಿಕೆ ಸಿಗಬೇಕು. ಈ ಪರಂಪರೆ ಎಲ್ಲರಿಗೂ ತಲುಪಲಿ ನೀಲಗಾರರು ಕಡಿಮೆ ಆಗುತ್ತಿದ್ದರು. ಇದೀಗ ಪ್ರೋತ್ಸಾಹ ಸಿಗುತ್ತಿದೆ ಎಂದು ಹೇಳಿದರು. ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ.ನಂಜಯ್ಯ ಹೊಂಗನೂರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಬಿಜೆಪಿ ಮುಕ್ತ ಭಾರತ ಆಗುವ ಕಾಲ: ತೇಜಸ್ವಿಗೌಡ



ಮೈಸೂರು: ಸತ್ಯಕ್ಕೆ ಅಲ್ಪಮಟ್ಟದ ಹಿನ್ನೆಡೆಯಾಗಿದೆ. ಮುಂದೆ ಇಡೀ ಬಿಜೆಪಿ ಅನಾಚಾರ ಮತ್ತು ಸುಳ್ಳನ್ನು ಈದೇಶದ ಜನ ಅರ್ಥ ಮಾಡಿಕೊಂಡು ಬಾರತದಿಂದ ಬಿಜೆಪಿ ಮುಕ್ತ ಆಗುವ ಕಾಲ ಸನ್ನಿಹದಲ್ಲಿದೆ ಎಂದು ಮಾಜಿ ಸಂಸದೆ ತೇಜಸ್ವಿನಿಗೌಡ ಅಭಿಪ್ರಾಯ ಪಟ್ಟರು.

ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿಯವರಿಗೆ ಕಾಂಗ್ರೆಸ್ ಮಹಾನಮನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಾಂಗ್ರೆಸ್ ಗೆ ಸದ್ಯದ ಪರಿಸ್ಥಿತಿಯಲ್ಲಿ ಅಲ್ಪ ಮಟ್ಟದ ಹಿನ್ನಡೆಯನ್ನು ಅನುಭವಿಸಿದೆ. ಆದರೆ ಅದು ಶಾಶ್ವತವಲ್ಲ. ಜನರಿಗೆ ಸತ್ಯದ ಅರಿವಾದಾಗ ಜನರೇ ಬಿಜೆಪಿಯ ಸುಳ್ಳುಗಳಿಗೆ ತಕ್ಕಪಾಠ ಕಲಿಸುತ್ತಾರೆ. ಆಗ ಜನರೇ ದೇಶದಲ್ಲಿ ಬಿಜೆಪಿ ಮುಕ್ತ ಮಾಡುತ್ತಾರೆಂದರು ಹೇಳಿದರು. ಇಂದಿರಾಗಾಂಧಿಯವರ ಅವಧಿಯಲ್ಲಿ ಭಾಂಗ್ಲಾ, ಪಾಕಿಸ್ತಾನ ಮತ್ತು ಚೀನಾ ಭಾರತದ ಗಡಿಭಾಗದಲ್ಲಿ ಒತ್ತಡವಿದ್ದವು. ಆದರೆ, ಯಾವ ವಿಚಾರಕ್ಕೂ ಇಂದಿರಾಗಾಂಧಿಯವರು ರಾಜೀ ಆಗಲಿಲ್ಲ. 1971 1972, 1973ರಲ್ಲಿ ನಿರಂತರವಾಗಿ ತೊಂದರೆ ಆಗುತ್ತಿತ್ತು. ಬಾಂಗ್ಲಾ ಸಂಪೂರ್ಣ ವಿಮೋಚನೆ ಆಗಲು ಇಂದಿರಾಗಾಂಧಿಯೇ ಕಾರಣ. ಅವರ ನೇರ ನಿಲುವು. ಆಗ ಅವರಲ್ಲಿನ ದೇಶಾಭಿಮಾನದಿಂದಲೇ ನಮ್ಮ ದೇಶ ಶತ್ರು ರಾಷ್ಟ್ರಗಳನ್ನು ಮೆಟ್ಟಿ ನಿಲ್ಲಲ್ಲು ಸಾಧ್ಯವಾಯಿತು ಎಂದರು.

ಈಗಿನ ಪರಿಸ್ಥಿತಿಯಲ್ಲಿ ಭದ್ರತೆ ಹೆಸರಿನಲ್ಲಿ ರಾಜಕೀಯ ಶುರುವಾಗಿದೆ. ದೆಹಲಿ, ಜಮ್ಮು, ಕಾಶ್ಮೀರದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ಹಾಗೂ ಭದ್ರತಾ ವಿಚಾರಗಳನ್ನು ಬಿಜೆಪಿ ರಾಜಕೀಯವಾಗಿ ಬಳಕೆ ಮಾಡಿಕೊಳ್ಳುತ್ತಿದೆ. ಇಂದಿರಾಗಾಂಧಿಯವರು ಭದ್ರತೆಯನ್ನು ಎಂದು ರಾಜಕೀಯವಾಗಿ ಬಳಸಿಕೊಳ್ಳಲಿಲ್ಲ. ಬಿಜೆಪಿ ದೇಶದ ಭದ್ರತೆಯನ್ನು ಫ್ಯಾಷನ್ ಮಾಡಿಕೊಂಡಿದೆ. ದೇಶದಲ್ಲಿ ನಡೆಯುತ್ತಿರುವ ಗಲಭೆ, ಬಾಂಬ್ ಸ್ಫೋಟದಂತಹ ಪ್ರಕರಣಗಳಲ್ಲಿ ಸತ್ಯವನ್ನು ತಿರುಚಿ ಬೇರೆಯ ಹೇಳಿಕೆ ನೀಡುತ್ತಿದೆ ಎಂದು ತಿಳಿಸಿದರು.

ಶಾಸಕ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಕಾಂಗ್ರೆಸ್ ಮುಖಂಡರಾದ ಜೆ.ಜೆ.ಆನಂದ್, ಕೋಟೆ ಎಂ.ಶಿವಣ್ಣ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಧ್ಯಕ್ಷ ಒಂಟಿಕೊಪ್ಪಲು ರವಿ, ಮಾಜಿ ಮೇಯರ್ ಗಳಾದ ಪುಷ್ಪವಲ್ಲಿ, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಈಶ್ವರ ಚಕ್ಕಡಿ, ಮೋಹನ್, ನಾಗೇಶ್, ಆಶೋಕ್ ಇನ್ನಿತರರು ಉಪಸ್ಥಿತರಿದ್ದರು.

# ಪತ್ರಕರ್ತರಿಗೆ ಸನ್ಮಾನ




ಕೆ.ಆರ್.ನಗರ: ತಾಲೂಕಿನ ಲಕ್ಕಿಕುಪ್ಪೆ ಗ್ರಾಮದಲ್ಲಿ ಪತ್ರಕರ್ತರಾದ ಕೆ.ಟಿ.ಮೋಹನ್ ಕುಮಾರ್ ಹಾಗೂ ಎಸ್.ಬಿ.ಬಸವರಾಜ್ ಅವರುಗಳನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಲ್.ವಿ.ಗೋಪಾಲ್, ಹಾಲಿನ ಡೇರಿಯ ಸಿಈಓ ಮಂಜುನಾಥ್, ಮುಖಂಡರಾದ ಎಲ್.ಕೆ.ಕುಮಾರ, ಆನಂದ್ ಇದ್ದರು.

# ರೈತರ ಎಲ್ಲಾ ಬೇಡಿಕೆಗಳನ್ನು ಈಡೇರಿಸಲಾಗುವುದು

ಗುಂಡ್ಲುಪೇಟೆ. ಪಟ್ಟಣದಲ್ಲಿ ವಿವಿದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕಳೆದ 36 ದಿನಗಳಿಂದ ಪಟ್ಟಣದ ತಾಲೂಕು ಕಚೇರಿ ಎದುರು ಅಹೋರಾತ್ರಿ ಧರಣಿ ನಡೆಸುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ರೈತರ ಜೊತೆ ಮಾತನಾಡಿದರು. ರೈತರು ತಮಗೆ ಯಾವುದೇ ಸಮಸ್ಯೆಗಳಾದರೂ ಅಧಿಕಾರಿಗಳ ಮೇಲೆ ಅವಲಂಬಿತರಾದರೆ ಅವರು ತಮ್ಮ ಮಟ್ಟದಲ್ಲಿ ಮಾತ್ರ ಕೆಸಲಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ತಿಂಗಳುಗಟ್ಟಲೆ ಪ್ರತಿಭಟನೆ ನಡೆಸದೆ ನಮ್ಮ ಗಮನಕ್ಕೆ ತಂದರೆ ಅವುಗಳನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಪರಿಹಾರ ಒದಗಿಸಲು ಕ್ರಮಕ್ಕೈಗೊಳ್ಳಲಾಗುವುದು. ಎಂದರು

ಪಂಪ್‌ಹೌಸ್‌ನಲ್ಲಿ ಕೆಟ್ಟಿದ್ದ ಮೋಟಾರುಗಳನ್ನು ರಿಪೇರಿ ಮಾಡಿ ಅಳವಡಿಸಲಾಗಿದೆ. ಡಿಸೆಂಬರ್ ಮೂದಲ ವಾರದ ವೇಳೆಗೆ ನೀರು ಹರಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಅರಣ್ಯ ಇಲಾಖೆಗೆ ಗಡಿ ಗುರ್ತಿಸುವ ಸರ್ವೇ ನಡೆಸುವಂತೆ ಸರ್ಕಾರ ಆದೇಶ ನೀಡಿದೆ. ಎಲ್ಲಾ ಕಡೆಗಳಲ್ಲಿಯೂ ಅರಣ್ಯ ಇಲಾಖೆ ಮತ್ತು ಕಾಡಂಚಿನ ಗ್ರಾಮಗಳ ಜಮೀನುಗಳ ಗಡಿ ಗುರ್ತಿಸುವಲ್ಲಿ ಸಮಸ್ಯೆಯಾಗುತ್ತಿದೆ. ಆದರೆ ರೈತರನ್ನು ಒಕ್ಕಲೆಬ್ಬಿಸಲು ಅವಕಾಶ ನೀಡುವುದಿಲ್ಲ. ಆದ್ದರಿಂದ ಅರಣ್ಯ ಇಲಾಖೆ ಕೂಡಲೇ ಜಂಟಿ ಸರ್ವೇ ನಡೆಸಿ ಬೇಗನೆ ರೈತರಿಗೆ ಎನ್‌ಓಸಿ ನೀಡಿದರೆ ಸಾಗುವಳಿಗಾಗಿ ಅರ್ಜಿ ಸಲ್ಲಿಸಿದ ರೈತರಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲು ಅನುಕೂಲವಾಗುತ್ತದೆ ಎಂದು ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.



ತಾಲೂಕಿನ ನಾಲ್ಕನೇ ಹಂತದ ಕರೆಗಳನ್ನು ತುಂಬಿಸುವುದಾಗಿ ನೀರಾವರಿ ಇಲಾಖೆ ಅಧಿಕಾರಿಗಳು ಕಳೆದ ವರ್ಷವೇ ಭರವಸೆ ನೀಡಿದ್ದರೂ ವರ್ಷವಾದರೂ ತುಂಬಿಸಿಲ್ಲ ಎಂದು ದೂರಿದರು. ನಿಗಮದ ಸೂಪರಿಂಟೆಂಡೆಟ್ ಇಂಜಿನಿಯರ್ ರಘುನಾಥ್ ಉತ್ತರಿಸಿ, ಒಂದು ಮೋಟಾರ್ ರನ್ನಿಂಗ್ ಇದೆ, ಇನ್ನೊಂದು ಮೋಟಾರ್ ರಿಪೇರಿಯಾಗಿದ್ದು ಇವತ್ತಿನಿಂದ ಎರಡು ಮೊಟರ್ ರೆಡಿಯಾಗಿದ್ದು ರನ್ನಿಂಗ್ ಮಾಡಲಾಗುತ್ತಿದೆ ಡಿಸೆಂಬರ್ ಮೊದಲ ವಾರದಲ್ಲಿ ಕೆರೆಗಳಿಗೆ ನೀರು ಬರಲಿದೆ ಎಂದರು.

ಬಂಡೀಪುರ ಹುಲಿ ಯೋಜನೆಯ ಕ್ಷೇತ್ರ ನಿರ್ದೇಶಕ ಎಸ್.ಪ್ರಭಾಕರನ್ ಮಾತನಾಡಿ, ನಿಯಮಾನುಸಾರ ಕಾಡಂಚಿನಿಂದ 100 ಮೀಟರ್ ಅಂತರದ ಜಮೀನುಗಳಿಗೆ ಎನ್‌ಓಸಿ ನೀಡಲಾಗುವುದಿಲ್ಲ. ಆದ್ದರಿಂದ ಕೂಡಲೇ ಜಂಟಿ ಸರ್ವೇ ನಡೆಸಿ ಒಂದು ವಾರದೊಳಗೆ ಅರ್ಜಿಗಳ ವಿಲೇವಾರಿಗೆ ಕ್ರಮಕ್ಕೈಗೊಳ್ಳಲಾಗುವುದು ಎಂದು ಹೇಳಿದರು. ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ ಕ್ಷೇತ್ರದ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಅನುಮೋದನೆಯಾಗಿ ಟೆಂಡರ್ ಹಂತದಲ್ಲಿದ್ದು ಸದ್ಯದಲ್ಲಿಯೇ ಚಾಲನೆ ನೀಡಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ರೈತ ಸಂಘದ ಕಾರ್ಯಾಧ್ಯಕ್ಷ ಮಹೇಶ್ ಪ್ರಭು ಹಾಗೂ ಮಹೇಶ್ ಕುಮಾರ್ , ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಕಾಡ ಮಾಜಿ ಅಧ್ಯಕ್ಷ ಹಂಗಳ ನಂಜಪ್ಪ. ಅಧಿಕಾರಿಗಳು ಇತರರು ಇದ್ದರು.

## "ಕೆರೆ ನೀರು ತುಂಬಿಸಲು ಪೈಪ್ ಲೈನ್ ಅವೈಜ್ಞಾನಿಕ"

### –ಕಡಬೂರು ಮಂಜುನಾಥ್ ಹೇಳಿಕೆ

ಗುಂಡ್ಲುಪೇಟೆ: ಮುಖ್ಯ ಕೆರೆಯಿಂದ ಪೈಪ್ ಲೈನ್ ಮಾಡಿದ ಮೇಲೆ ಸಣ್ಣ ಕೆರೆಗಳನ್ನ ತುಂಬಿಸಲು ಯಾಕೆ ಪೈಪ್ ಲೈನ್ ಬೇಕು ಇದರಿಂದ ಹೇಗೆ ಅಂತರ್ಜಲ ಅಭಿವೃದ್ಧಿ ಸಾಧ್ಯ? ಹಾಗಾಗಿ ಇದೊಂದು ಅವೈಜ್ಞಾನಿಕ ಕ್ರಮವಾಗಿದೆ ಎಂದು ಜೆಡಿಎಸ್ ನ ತಾಲ್ಲೂಕು ಅಧ್ಯಕ್ಷರಾದ ಕಡಬೂರು ಮಂಜುನಾಥ್ ಆರೋಪಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು



ಎಲ್ಲಾ ಕೆರೆಗಳನ್ನು ತುಂಬಿಸಲು ಒಟ್ಟು ಎಷ್ಟು ಖಿಒಅ ನೀರನ್ನ ನಾವು ಪಡೆದುಕೊಳ್ಳುತ್ತಿದ್ದೇವೆ, ಅದರಲ್ಲಿ ನಾವು ಎಷ್ಟು ಟಿಎಂಸಿ ನೀರನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡಿದ್ದೇವೆ, ಅನ್ನುವುದರ ಮಾಹಿತಿಯನ್ನು ಸಂಪೂರ್ಣವಾಗಿ ತಿಳಿದುಕೊಂಡು ಪೈಪ್ ಲೈನ್ ಮೂಲಕ ತುಂಬಿಸುವುದು ಕೃಷಿ ಹೊಂಡ ಗಳನ್ನ, ಪೈಪ್ಲೈನ್ ಮೂಲಕ ತುಂಬಿಸುವುದು ನೀರಿನ ಕೊಳಗಳನ್ನ, ಪೈಪ್ ಲೈನ್ ಮೂಲಕ ತುಂಬಿಸಬೇಕು ಅದನ್ನು ಬಿಟ್ಟು ಕೆರೆಗಳನ್ನ ಪೈಪ್ ಲೈನ್ ಮೂಲಕ ತುಂಬಿಸುತ್ತೇವೆ ಎನ್ನುವ ಯೋಚನೆ ಆಲೋಚನೆಗಳು ಯಾರಿಗಾದರೂ ಇದ್ದರೆ ಅದನ್ನು ಬಿಟ್ಟುಬಿಡಿ ಇದರಿಂದ ರೈತರಿಗೆ ಏನೂ ಉಪಯೋಗಿಲ್ಲ. ಅಂತಹ ಯೋಚನೆಗಳನ್ನು ಮಾಡಿದರೆ ನಿಮಗಿರುವ ಅಧಿಕಾರಕ್ಕೆ ನೀವೇ ಗುಂಡಿ ತೋಡಿಕೊಂಡಂತಾಗುತ್ತದೆ.

ಪೈಪ್ ಲೈನ್ ಮೂಲಕ ನೀರು ಬಿಡುತ್ತೇವೆ ಎನ್ನುವವರು ವೈಜ್ಞಾನಿಕವಾಗಿ ಮತ್ತು ಸಾಮಾನ್ಯವಾಗಿ ಒಂದು ಆಲೋಚನೆಯನ್ನು ಮಾಡಬೇಕಾಗಿದೆ ಅದೇನೆಂದರೆ ಕೆರೆಗಳ ಸುತ್ತಮುತ್ತ ಇರುವ ನಾಲ್ಕೈದು ಜನರು ಮಾತ್ರ ರೈತರಲ್ಲ ಕಾಲುವೆಗಳ ಮೂಲಕ ನೀರು ಹರಿದು ಹೋಗಿ ಕೆರೆ ಸೇರುವ ಸುತ್ತಮುತ್ತ ಇರುವವರೂ ಸಹ ರೈತರಲ್ಲವೇ ಎಂಬುದನ್ನು ಯೋಚನೆ ಮಾಡಿ, ಮುಖ್ಯ ಕೆರೆಗೆ ಪೈಪ್ ಲೈನ್ ಮೂಲಕ ನೀರನ್ನು ತರಲಾಗಿದೆ, ಅವರೇ ಇನ್ನುಳಿದ ಸಣ್ಣ ಕೆರೆಗಳಿಗೆ ಕಾಲುವೆ ಮೂಲಕನೇ ನೀವು ತುಂಬಿಸಿದರೆ ಮಾತ್ರ ಅಂತರ್ಜಲ ಅಭಿವೃದ್ಧಿಯಾಗುವುದು ಕುಡಿಯುವ ನೀರಿನ ಆಹಾಕಾರ ನಿಲ್ಲುವುದು ಹಾಗೂ ರೈತರ ಬದುಕು ಸಮೃದ್ಧವಾಗುವುದು.

ಮಹದೇವ ಪ್ರಸಾದ್ ರವರು ಶಾಸಕರಾಗಿದ್ದ ಕಾಲದಲ್ಲಿ ಪೈಪ್ ಲೈನ್ ಮೂಲಕ ನೀರು ಬಿಡುವುದು ಬೇಡ ಎಂದು ಉಗ್ರವಾದ ಹೋರಾಟವನ್ನು ಮಾಡಿ, ಮತ್ತೆ ನಿರಂಜನ್ ಕುಮಾರ್ ರವರ ಅವಧಿಯಲ್ಲೂ ಪೈಪ್ ಲೈನ್ ಮಾಡಿದರೆ ಯಾವುದೇ ಕಾರಣಕ್ಕೂ ಪೈಪ್ಲೈನ್ ಗೆ ಅವಕಾಶ ನೀಡುವುದಿಲ್ಲ ಹಾಗೂ ಬಲವಂತವಾಗಿ ಮಾಡಿದರೆ ನಿಮ್ಮ ಪೈಪ್ ಲೈನ್ ನನ್ನು ರೈತರೇ ಕಿತ್ತು ಹಾಕುತ್ತಾರೆ ಎಂಬ ಎಚ್ಚರಿಕೆಯನ್ನು ಅರಿತು ಕಾಲುವೆ ಮೂಲಕ ನೀರು ಹರಿಯಲು ಅಂದಿನ ದಿನಗಳಲ್ಲಿ ಅವಕಾಶ ಮಾಡಿಕೊಡಲಾಗಿದೆ. ಮತ್ತೆ ಪೈಪ್ ಲೈನ್ ವಿಷಯವನ್ನು ದಯವಿಟ್ಟು ಯಾರೂ ಮಾತನಾಡಬೇಡಿ. ನಿಮಗೆ ಮಾಹಿತಿ ಕೊಡುತ್ತಿದ್ದಾರಲ್ಲ ಪೈಪ್ ಲೈನ್ ಮೂಲಕ ಆದರೆ ಎಲ್ಲಾ ಕೆರೆಗಳು ತುಂಬಿ ಬಿಡುತ್ತವೆ ಎಂದು ವೈಜ್ಞಾನಿಕ ಐಡಿಯಾಗಳನ್ನ ಅವರಿಗೆ ಕೇಳಿ ನಾವು ನೀರನ್ನ ಬಿಡುವಾಗ ಒಂದು ಒಳ್ಳೆಯ ಮಳೆಯಾದ ಮಾರನೆಯ ದಿನ ಬಿಟ್ಟರೆ ಅದೇ ತೇವಾಂಶವನ್ನು ನೀರು ಬಿಡುವ ಅವಧಿ ಮುಗಿಯುವವರೆಗೂ ಸ್ವಾಭಾವಿಕವಾಗಿಯೇ ಕಾಪಾಡಿಕೊಳ್ಳುತ್ತದೆ ಅಲ್ಲವೇ ಎಂದು ಪ್ರಶ್ನೆ ಮಾಡಿ ಆಗ ಉತ್ತರ ಸಿಗುತ್ತದೆ. ಇಂತಹ ದಾರಿಗೆ ಬರದ ಪೈಪ್ ಲೈನ್ ಯೋಜನೆಯ ಯೋಚನೆ ಮಾಡುವ ಬದಲು ಸಮುದ್ರಕ್ಕೆ ವ್ಯರ್ಥವಾಗಿ ನೂರಾರು ಟಿಎಂಸಿ ನೀರು ಸೇರುತ್ತದೆ, ರೈತರಿಗೆ ಉಪಯೋಗ ಮಾಡಲು ಯೋಚನೆ ಮಾಡಿ, ನಮ್ಮ ಕೆರೆಗಳಿಗೆ ನಮ್ಮ ಪಾಲಿನ ಸಂಪೂರ್ಣ ನೀರನ್ನು ಪಡೆದುಕೊಳ್ಳುವ ಕೆಲಸ ಮಾಡಿ ನಮ್ಮ ಪಾಲಿನ ನೀರು ಮೂರು ವರ್ಷದಿಂದಲೂ ಸಮುದ್ರ ಸೇರುತ್ತಿದೆ.

ಈಗ ನೀವು ನೋಡುತ್ತಿರುವ ಪ್ರತಿಭಟನೆಗಳು ಸ್ಯಾಂಪಲ್ ಅಷ್ಟೇ ಪಕ್ಷ ವ್ಯಕ್ತಿ ಯಾವುದನ್ನು ನೋಡದೆ ಪ್ರತಿಯೊಂದು ಮನೆಯಿಂದ ರೈತರು ದಂಗೆ ಎದ್ದು ಹೊರ ಬರುತ್ತಾರೆ ಎಚ್ಚರ.... ಅವಿವೇಕಿ ಶತ ಮೂರ್ಖ ಇಂಜಿನಿಯರ್ಗಳು ಮಾಡುವ ಕೆಲಸವನ್ನ ಸಮರ್ಥವಾಗಿ ಮಾಡದಿದ್ದರೂ ಕೂಡ, ಸಮಯಕ್ಕೆ ತಕ್ಕ ಸಿದ್ಧತೆಯನ್ನ ಮಾಡಿಕೊಳ್ಳದಿದ್ದರೂ ಕೂಡ ಶಾಸಕರುಗಳು ಮತ್ತು ಸರ್ಕಾರವನ್ನ ದಿಕ್ಕು ತಪ್ಪಿಸುವುದರಲ್ಲಿ ನಂಬರ್ ಒನ್ ಇದ್ದಾರೆ,,, ರೈತರ ಮಾತನ್ನು ಕೇಳಿ ಇಂಜಿನಿಯರ್ ಮಾತುಗಳನ್ನು ಕೇಳಬೇಡಿ ಇಂಜಿನಿಯರಿಗಳಿಗೆ( ನೀರಾವರಿ ನಿಗಮಕ್ಕೆ ಸಂಬಂಧಪಟ್ಟ ) ಅನುಭವವೇ ಇಲ್ಲ. ಹಾಗಾಗಿ ಸಂಬಂಧಪಟ್ಟ ಅಧಿಕಾರಿಳ ಮೇಲೂ ಕಾನೂನು ಕ್ರಮ ಜರುಗಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

# ಯೋಜನೆ ರೂಪಿಸುವಾಗ ಜನರ ಪಾಲ್ಗೊಳ್ಳುವಿಕೆ ಮುಖ್ಯ: ಡಿ.ಆರ್.ಪಾಟೀಲ್

### ಮೈಸೂರು ವಿಭಾಗ ಮಟ್ಟದ ಅಧಿಕಾರಿಗಳ ಸಭೆ



ಮೈಸೂರು: ಸರ್ಕಾರ ಸಾರ್ವಜನಿಕರ ಅಭಿವೃದ್ಧಿಗಾಗಿ ಯೋಜನೆ ರೂಪಿಸುತ್ತದೆ. ಈ ಹಿನ್ನಲೆಯಲ್ಲಿ ಯೋಜನೆಗಳನ್ನು ರೂಪಿಸುವಾಗ ಜನರ ಪಾಲ್ಗೊಳ್ಳುವಿಕೆ ಅತಿ ಮುಖ್ಯ ಎಂದು ಕರ್ನಾಟಕ ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮೈಸೂರು ವಿಭಾಗ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ಅಧಿಕಾರಿಗಳು ಕಾನೂನು ಬದ್ಧವಾಗಿ ಕೆಲಸ ನಿರ್ವಹಿಸಿದರೆ ಅಭಿವೃದ್ಧಿ ಬಹಳ ಸುಲಭವಾಗಿ ನಡೆಯುತ್ತದೆ. ಜನರ ಬೇಡಿಕೆ ಬಹಳಷ್ಟು ಇರುತ್ತದೆ. ಜನರಿಂದ ಮಾಹಿತಿ ಪಡೆದು ಯೋಜನೆ ರೂಪಿಸುವುದು ಕಷ್ಟಕರವಾಗಿರುತ್ತದೆ. ಆದರಿಂದ ಯೋಜನೆ ರೂಪಿಸುವಾಗ ಯಾವ ವಿಷಯಕ್ಕೆ ಆದ್ಯತೆ ನೀಡಬೇಕು ಎಂಬುದನ್ನು ತಿಳಿಸಲಾಗುವುದು. ಯೋಜನೆ ಅನುಷ್ಠಾನದ ಸಂದರ್ಭದಲ್ಲಿ ಯಾವ ಫಲಾನುಭವಿಗೆ ಆದ್ಯತೆ ನೀಡಬೇಕು ಎಂಬುದನ್ನು ತಿಳಿಸಲಾಗುವುದು ಎಂದರು.

ಜನರ ಪಾಲ್ಗೊಳ್ಳುವಿಕೆ ಯಿಂದ ಜನೋಪಯೋಗಿ ಕೆಲಸ ಮಾಡಬಹುದು ಎಂಬ ಆಶಯದೊಂದಿಗೆ ಸಭೆಗಳನ್ನು ನಡೆಸುತ್ತಿದ್ದು, ಜಿಲ್ಲಾ ಯೋಜನಾ ವಿವರಗಳನ್ನು ಆಯವ್ಯಯಕ್ಕೂ ಮುನ್ನ ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಲು ಸಿದ್ಧತೆ ಮಾಡಿಕೊಳ್ಳಬೇಕು.ಗ್ರಾಮ ಮಟ್ಟದಲ್ಲಿ ಗ್ರಾಮ ಸಭೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ನೋಡಬಹುದಾಗಿದೆ. ನಗರ ಪ್ರದೇಶದಲ್ಲಿ ಜನರ ಪಾಲ್ಗೊಳ್ಳುವಿಕೆ ಕಾಣುತ್ತಿಲ್ಲ. ಆದರಿಂದ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಡಿಸೆಂಬರ್ 6 ರೊಳಗೆ 100 ಮತಗಳಿಗೆ ಇಬ್ಬರನ್ನು ಆಯ್ಕೆ ಮಾಡಿ ನೆಯ್ಬರ್ ವುಡ್ ಗ್ರೂಪ್ ರಚಿಸಿ ನಂತರ ವಾಡ್9 ಸಭೆಗಳನ್ನು ರಚಿಸಿ ನಗರ ಪ್ರದೇಶದ ಯೋಜನೆಗಳನ್ನು ರೂಪಿಸಿ. ಗ್ರಾಮ ಹಾಗೂ ವಾಡ್9 ಸಭೆಗಳಿಂದ ಜನರ ಅಭಿಪ್ರಾಯ ಪಡೆದು ತಾಲ್ಲೂಕು ಮಟ್ಟದ ಯೋಜನೆ ರೂಪಿಸಿ ನಂತರ ಜಿಲ್ಲಾ ಮಟ್ಟದಲ್ಲಿ ಕ್ರೋಢಿಕರಿಸಿ ವರದಿಯನ್ನು ನೀಡಿ. ಜಿಲ್ಲಾ ಯೋಜನಾ ಸಮಿತಿಗಳ ಕಾರ್ಯನಿರ್ವಹಣೆ ಪರಿಣಾಮಕಾರಿಯಾಗಿ ನಡೆದರೆ ಮುಂದಿನ ದಿನಗಳಲ್ಲಿ ಬಹಳಷ್ಟು ಜನರ ಕಷ್ಟಗಳು ಪರಿಹಾರವಾಗುತ್ತದೆ ಎಂದರು.

ಪ್ರಾದೇಶಿಕ ಆಯುಕ್ತ ನಿತೀಶ್ ಪಾಟೀಲ್ ಮಾತನಾಡಿ ಜಿಲ್ಲೆಯ ಪ್ರಗತಿಪರ ಯೋಜನೆಗಳನ್ನು ರೂಪಿಸುವ ಸಲುವಾಗಿ ಈಗಾಗಲೇ ತರಬೇತಿಗಳನ್ನು ನೀಡಲಾಗಿದೆ. ಕೆಲವು ಜಿಲ್ಲೆಗಳಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಹಂತದಲ್ಲಿ ಯೋಜನೆ ರೂಪಿಸುವುದು ಬಾಕಿ ಇದ್ದು, ಶೀಘ್ರವಾಗಿ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ, ಮೈಸೂರು ಜಿಲ್ಲಾ ಪಂಚಾಯತ್ ಯುಕೇಶ್ ಕುಮಾರ್, ಚಾಮರಾಜನಗರ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಗಳ ಯೋಜನೆಯ ವಿವರಗಳನ್ನು ವಿವರಿಸಿದರು. ಸಭೆಯಲ್ಲಿ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸೇರಿ ಮೈಸೂರು ವಿಭಾಗದ ವಿವಿಧ ಜಿಲ್ಲೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ನಮ್ಮ ಮೈಸೂರು ನಮ್ಮ ಕೊಡುಗೆ ಕಾರ್ಯಕ್ರಮಕ್ಕೆ 3000 ಗಿಡಗಳ ಕೊಡುಗೆ



ಮೈಸೂರು: 'ನಮ್ಮ ಮೈಸೂರು ನಮ್ಮ ಕೊಡುಗೆ' ಎಂಬ ವಿಶೇಷ ಅಭಿನಂದನಾ ಸಮಾರಂಭದಲ್ಲಿ ಮೈಸೂರು ಮಹಾನಗರ ಪಾಲಿಕೆಯು ಹೆಚ್.ವಿ.ರಾಜೀವ್ ಸ್ನೇಹ ಬಳಗದ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರಿಗೆ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಿತು.

2025–26ನೇ ಸಾಲಿನಲ್ಲಿ ಪಾಲಿಕೆಗೆ 3000 ಗಿಡಗಳನ್ನು ಕೊಡುಗೆಯಾಗಿ ನೀಡುವ ಮೂಲಕ 'ನಮ್ಮ ಮೈಸೂರು ಪರಿಸರ ಸಂರಕ್ಷಣಾ ಕಾರ್ಯಕ್ರಮಕ್ಕೆ' ಬೆಂಬಲ ನೀಡಿದ ಹಿನ್ನೆಲೆಯಲ್ಲಿ ಈ ಕೃತಜ್ಞತೆಯನ್ನು ಸಲ್ಲಿಸಲಾಯಿತು. ಪಾಲಿಕೆಯ ಆಯುಕ್ತ ಶೈಕ್ ತನ್ವೀರ್ ಆಸೀಫ್ ಹೆಚ್.ವಿ. ರಾಜೀವ್ ಉದಾರ ಕೊಡುಗೆಯನ್ನು ಶ್ಲಾಘಿಸಿ, ಮೈಸೂರಿನ ಹಸಿರೀಕರಣಕ್ಕೆ ಅವರ ಪಾತ್ರ ಮಹತ್ವದ್ದು ಎಂದು ತಿಳಿಸಿದರು. ಪರಿಸರ ಸಂರಕ್ಷಣೆಯ ಮಹತ್ವಾಕಾಂಕ್ಷೆಯ ಕಾರ್ಯಕ್ರಮಕ್ಕೆ ನೀಡಿದ ಈ ಬೆಂಬಲಕ್ಕಾಗಿ ಆಯುಕ್ತರು ತುಂಬು ಹೃದಯದ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಮಹಾಪೌರ ಭೈರಪ್ಪ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್, ಹೆಚ್.ವಿ.ರಾಜೀವ್ ಸ್ನೇಹ ಬಳಗದ ಸದಸ್ಯರಾದ ಎಸ್.ರಂಗನಾಥ, ಶೇಷಪ್ರಸಾದ್, ಸೂರಿ, ವಾಸು ಸೇರಿ ಇನ್ನಿತರರು ಉಪಸ್ಥಿತರಿದ್ದರು.

# 23ಕ್ಕೆ ಅಮೃತ ರಾಮಾಯಣ 2 ಸಂಪುಟ

ಮೈಸೂರು: ವಾಸವಿ ಪ್ರಕಾಶನ ಮತ್ತು ತಿಪ್ಪೂರಿನ ಮಿತ್ರಕೂಟಗಳ ಸಂಯುಕ್ತಾಶ್ರಯದಲ್ಲಿ ನ. 23 ರಂದು ಬೆಳಗ್ಗೆ 10.30ಕ್ಕೆ ನಗರದ ಮಾನಸ ಗಂಗೋತ್ರಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಕವಿ ಕೃಷ್ಣ ತಿಪ್ಪೂರು ಅವರ ಅಮೃತ ರಾಮಾಯಣ ಮಹಾಕಾವ್ಯದ 2 ಸಂಪುಟಗಳ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ತಿಳಿಸಿದರು.

ಕವಿ ಕೃಷ್ಣ ತಿಪ್ಪೂರು ಗ್ರಾಂಈಣ ಪ್ರದೇಶದವರಾಗಿದ್ದು, ಇದುವರೆಗೂ ಹಲವಾರು ಕೃತಿ ರಚಿಸಿದ್ದಾರೆ. ಅಂದು ಇವರ ಮಹಾಕಾವ್ಯ ಸಂಪುಟಗಳು ಬಿಡುಗಡೆಯಾಗಿಲಿವೆ. ಡಾ. ತ್ರಿನೇತ್ರ ಮಹಂತ ಶಿವಯೋಗಿ



ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಶಾಸಕ ಡಿ. ರವಿಶಂಕರ್ ಅಧ್ಯಕ್ಷತೆ ವಹಿಸುವರು, ಶಾಸಕ ಟಿ.ಎಸ್. ಶ್ರೀವತ್ಸ ಉದ್ಘಾಟಿಸುವರು, ಖ್ಯಾತ ಕವಿ ಡಾ.ಸಿಪಿ. ಕೃಷ್ಣಕುಮಾರ್ ಆಶಯ ನುಡಿ ಆಡುವರು, ಡಾ.ಬಿ.ವಿ. ವಸಂತಕುಮಾರ್ ಕೃತಿ ಬಿಡುಗಡೆಗೊಳಿಸುವರು, ಕೃತಿ ಕುರಿತು ಪ್ರೊ. ಕವಿತಾ ರೈ ಮಾತನಾಡುವರು, ಮಡ್ಡಿಕೆರೆ ಗೋಪಾಲ್, ಡಾ.ಬಿ.ಸಿ. ಚಿಲ್ಕರಾಗಿ, ಬಿ. ನಾಗೇಶ್ ಅತಿಥಿಗಳಾಗಿರುವರೆಂದರು. ಕವಿ ಕೃಷ್ಣ ತಿಪ್ಪೂರು, ಮಂಜುನಾತ ಗುಪ್ತ ಹಾಜರಿದ್ದರು.

# ವಿದ್ಯಾರ್ಥಿನಿಯರ ಸಾಧನೆ, ಸನ್ಮಾನ




ಚಾಮರಾಜನಗರ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕ್ರೀಡೆಗೂ ಮಹತ್ವ ಕೊಡಬೇಕು ಎಂದು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ ಬಿಎಸ್ ಮಹಾದೇವಸ್ವಾಮಿ ತಿಳಿಸಿದರು.

ಚಾಮರಾಜನಗರ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಲಾಗಿದ್ದ ಅಂತರ ಕಾಲೇಜುಗಳ ಮಹಿಳೆಯರ ಅಥ್ಲೆಟಿಕ್ಸ್ ಕೂಟದಲ್ಲಿ ಪ್ರಶಸ್ತಿಗೆ ಭಾಜನರಾದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು. ದೈಹಿಕ ನಿರ್ದೇಶಕ ಡಾ ಶಾಂತರಾಜು ಮಾತನಾಡಿ 21 ವಿದ್ಯಾರ್ಥಿನಿಯರು ನಿರಂತರ ಕಠಿಣ ಪರಿಶ್ರಮ ಹಾಗೂ ಅಭ್ಯಾಸದಿಂದ ಕಾಲೇಜಿಗೆ ಸಮಗ್ರ ಪ್ರಶಸ್ತಿ ಬರುವಂತ್ತಾಯಿತು ಎಂದು ತಿಳಿಸಿದರು. ಇತ್ತೀಚಿಗೆ ನಡೆದ ಗುಡ್ಡಗಾಡು ಕ್ರೀಡಾಕೂಟದಲ್ಲೂ ಸರ್ಕಾರಿ ಮಹಿಳಾ ಕಾಲೇಜು ವಿದ್ಯಾರ್ಥಿನಿಯರು ಸಾಧನೆ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಉಪನ್ಯಾಸಕರಾದ. ಜಯಣ್ಣ. ದೀಪ ಹಾಗೂ ಇತರರು ಹಾಜರಿದ್ದರು.

# ಬಡವರನ್ನು ಆರ್ಥಿಕವಾಗಿ ಮೇಲೆತ್ತಿದ ಇಂದಿರಾ

ಚಾಮರಾಜನಗರ, ಮಾಜಿಪ್ರಧಾನಿ ಇಂದಿರಾಗಾಂಧಿ ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೀನದಲಿತರು ಹಿಂದುಳಿದ ವರ್ಗಗಳ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಬಣ್ಣಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋ ಜಿಸಿದ್ದ ಮಾಜಿ ಪ್ರಧಾನಿ ಇಂದಿರಾಗಾಂಧಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಇಂದಿರಾಗಾಂಧಿ ಅವರು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಉಕ್ಕಿನ ಮಹಿಳೆ ಎಂದೇ ಖ್ಯಾತಿ ಪಡೆದಿದ್ದ ಇಂದಿರಾಗಾಂಧಿ ಅವರ ಜನಪರ ಕಾರ್ಯಕ್ರಮಗಳು ಇಂದಿಗೂ ಜನಮಾನಸದಲ್ಲಿ ಉಳಿದಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ,ಮರಿಸ್ವಾಮಿ ಮಾತನಾಡಿ, ಮಾಜಿ ಪ್ರಧಾನಿ ಇಂದಿರಾ ಗಾಂಧಿ ಇಂದಿರಾ ಗಾಂಧಿ ಅವರು ದೇಶದ ಕಂಡ ಸಮರ್ಥ ಪ್ರಧಾನಿಗಳಲ್ಲಿ ಒಬ್ಬರಾಗಿದ್ದರು, ದೇಶವನ್ನು ಮುನ್ನಡೇಸುವ ಜೂತೆಗೆ ನೆರೆ ದೇಶಗಳೂಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ, ಅಭಿವೃದ್ದಿಗೆ ಹೆಚ್ಚಿನ ಆದ್ಯತೆ ನೀಡಿದ್ದರು, ಇಂದಿರಾ ಗಾಂಧಿ




ಅವರ ಆದರ್ಶವನ್ನು ಮೈಗೂಡಿಸಿಕೂಂಡು ಅವರ ಹಾದಿಯಲ್ಲಿ ಯುವಜನತೆ ಮುನ್ನಡೆಯಬೇಕಾದ ಅವಶ್ಯಕತೆ ಇದೆ ಎಂದು ಹೇಳಿದರು, ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ಮುನ್ನಾ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ನಾಗರತ್ನಾ, ನಗರಸಭೆ ಮಾಜಿಸದಸ್ಯ ಸ್ವಾಮಿ, ಪ್ರಾಧಿಕಾರದ ಸದಸ್ಯ ಪುಟ್ಟಸ್ವಾಮಿ, ಜಿಪಂ ಸದಸ್ಯೆ ಮಾಜಿ ಸದಸ್ಯೆ ಕಾವೇರಿಶಿವಕುಮಾರ್, ಮಾದಾಪುರ ಗ್ರಾಪಂ ಅಧ್ಯಕ್ಷ ರೂಪೇಶ್, ಎಸ್ಸಿಎಸ್ಟಿ ಜಾಗೃತಿ ಉಸ್ತುವಾರಿ ಸಮಿತಿ ಸದಸ್ಯ ಪಿ.ಸಿದ್ದರಾಜು, ಶಕುಂತಲಾ, ನಾಗಶ್ರೀ, ಭಾಗ್ಯಮ್ಮ, ನಸ್ರುಲಾಖಾನ್, ಮರಿಯಾಲಹುಂಡಿಕುಮಾರ್, ಅಕ್ಷಯ್ ಕುಮಾರ್, ಜಿ,ಡಿ. ಪ್ರಕಾಶ್, ಎ,ಪಿ.ಎಂ.ಸಿ.ಮಾಜಿ ಅಧ್ಯಕ್ಷ ನಾಗೇಂದ್ರ, ಅಪ್ಸರ್ ಅಹಮದ್, ಇಮ್ರಾನ್‌ಅಹಮದ್, ಕುಮಾರ್, ರವಿಗೌಡ, ಜಬೀವುಲ್ಲ, ನಾಗಯ್ಯ ನಾಗವಳ್ಳಿ, ಮಹದೇವಯ್ಯ, ಪಾವನ್, ರಾಮಸಮುದ್ರ ಶಿವಮೂರ್ತಿ. ಪಕ್ಷದ ಕಾರ್ಯಕರ್ತರು ಮುಖಂಡರು ಹಾಜರಿದ್ದರು.

# ವಿಜಯನಗರದಲ್ಲಿ ಒಡಿಸ್ಸಿ ಉತ್ಸವ

ಮೈಸೂರು: ಗೋಕುಲಂ 3 ನೇ ಹಂತದಲ್ಲಿನ ರುದ್ರ ನೃತ್ಯಶಾಲೆ ವತಿಯಿಂದ ನ. 23 ರ ಸಂಜೆ 5.30ಕ್ಕೆ ವಿಜಯನಗರದ ಜಗನ್ನಾಥ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ಮೈಸೂರು ಒಡಿಸ್ಸಿ ಉತ್ಸವ ಆಯೋಜಿಸಲಾಗಿದೆ ಎಂದು ನೃತ್ಯಶಾಲೆಯ ವಿದ್ಯಾರ್ಥಿನಿ ಪೃಥೇ ಅರ?ವಾಲ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಾಲೆಯ ನೃತ್ಯಗುರು ಸಿಂಧು ಕಿರಣ್ ಅವರ ವಿದ್ಯಾರ್ಥಿಗಳ ಕಾರ್ಯಕ್ರದ ಮೂಲಕ ಆರಂಭ ನಡೆಯಲಿದೆ. ಖ್ಯಾತ ನೃತ್ಯ ಕಲಾವಿದರಾದ ಪ್ರಸೂನ್ ಮಂಡಲ್, ಓಜಸ್ ಬಳ್ಳೂರು, ಅಮೃತಾ, ವಿಜಿತ್ ಕುಂದು, ಸಾನ್ವಿ ಇನ್ನಿತರರು ಅತಿಥಿಗಳಾಗಿರುವರು. ವಿವಿಧ ಸಂಘ ಸಂಸ್ಥೆ, ನೃತ್ಯ ಕೇಂದ್ರಗಳ ವಿದ್ಯಾರ್ಥಿಗಳು, ಕಲಾವಿದರು ಒಡಿಸ್ಸಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ತಿಳಿಸಿದರು. ಸಿಂಧು ಕಿರಣ್, ಲಿವ್ಯಾ, ವೈದ್ಯನಾಥ್ ಹಾಜರಿದ್ದರು.




### ಸಂಸದ ಡಾ.ಸಿ.ಎನ್.ಮಂಜುನಾಥ್ ಅಭಿಮತ

# ಪಟೇಲರ ದೇಶಪ್ರೇಮದಿಂದ ಭಾರತ ಬಲಶಾಲಿಯಾಗಿದೆ

ರಾಮನಗರ: ರಾಜ–ಮಹಾರಾಜರ ಆಳ್ವಿಕೆಯಲ್ಲಿದ್ದ ಎಲ್ಲ ಸಂಸ್ಥಾನಗಳನ್ನು ಸ್ವಾತಂತ್ರ್ಯಾನಂತರ ಒಗ್ಗೂಡಿಸಿ ದೇಶವನ್ನು ಸರ್ದಾರ್ ವಲ್ಲಭಬಾಯಿ ಪಟೇಲರು ಏಕೀಕೃತವಾಗಿಸಿದ ಮಹತ್ವದ ಕಾರ್ಯದಿಂದಾಗಿ ಇಂದು ಭಾರತ ದೇಶ ಬಲಶಾಲಿ ರಾಷ್ಟ್ರವಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ಹೇಳಿದರು.

ನಗರದ ಆರ್.ವಿ.ಪಿ.ಎಸ್ ಕಲ್ಯಾಣ ಮಂಟಪದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಡಳಿತ, ಮೈ ಭಾರತ್ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ರಾಷ್ಟ್ರೀಯ ಏಕತಾ ದಿನ ಸರ್ದಾರ್ @ 150 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. . ಭಾರತದ ಸ್ವಾತಂತ್ರ್ಯದ ವೇಳೆಯಲ್ಲಿ ದೇಶದಲ್ಲಿದ್ದ 500ಕ್ಕಿಂತ ಹೆಚ್ಚು ಸಂಸ್ಥಾನಗಳನ್ನು ಒಗ್ಗೂಡಿಸುವುದು ಸುಲಭದ ಕೆಲಸವಾಗಿರಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ



ಏಕತೆ ಮೂಡಿದಾಗ ಮಾತ್ರ ದೇಶ ಬಲಶಾಲಿಯಾಯಿತು. ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಸರ್ದಾರ್ ವಲ್ಲಭಬಾಯಿ ಪಟೇಲ್ ಅವರಂತೆ ದೇಶಭಕ್ತಿಯ ಮಹತ್ವವನ್ನು ಅರ್ಥಮಾಡಿಕೊಳ್ಳಬಹುದು ಎಂದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಕನಸಿನಂತೆ ಭಾರತವು ಜಗತ್ತಿನ ಅತಿ ದೊಡ್ಡ ಮತ್ತು ಸದೃಢ ರಾಷ್ಟವಾಗಿ ರೂಪುಗೊಳ್ಳುತ್ತಿದೆ. ಶಿಕ್ಷಣವೇ ಪ್ರಗತಿಯ ಚಾವಿ; ದೇಶದ ಭವಿಷ್ಯ ವಿದ್ಯಾರ್ಥಿಗಳ ಕೈಯಲ್ಲಿದೆ. ವಿದ್ಯಾರ್ಥಿಗಳೇ ನಾಳೆಯ ಭಾರತದ ನಿಜವಾದ ಶಕ್ತಿ ಎಂದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣದಲ್ಲಿ ಜಿಲ್ಲಾ ಮಟ್ಟದ ಸರ್ದಾರ್ @150 ಏಕತಾ ಪಾದಯಾತ್ರೆಗೆ ಸಂಸದರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನ್ಮೋಲ್ ಜೈನ್, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಉಪವಿಭಾಗಾಧಿಕಾರಿ ಬಿನೋಯ್, ಅಪರ ಪೊಲೀಸ್ ವರಿಷ್ಠಾಧಿಕಾರಿ ರಾಜೇಂದ್ರ, ಮೈಭಾರತ್ ಜಿಲ್ಲಾ ಅಧಿಕಾರಿ ಶ್ರೀವಾಣಿ, ಮುಖಡಂರುಗಳು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸತೀಶ್ ಸ್ವಾಗತಿಸಿದರು.

# ಡಿಜಿಟಲ್ ಅಪರಾಧ ತಡೆಗೆ ಜಾಗೃತಿ ಅಗತ್ಯ



ಚಾಮರಾಜನಗರ, ತಂತ್ರಜ್ಞಾನದ ಯುಗದಲ್ಲಿ ಡಿಜಿಟಲ್ ಅಪರಾಧಗಳು ಹೆಚ್ಚುತ್ತಿವೆ. ಸಾರ್ವಜನಿಕರು ಅಂತರ್ಜಾಲ ಬಳಕೆ ಬಗ್ಗೆ ಎಚ್ಚರ ವಹಿಸಬೇಕು ಎಂದು ಸೆನ್ಡಿವೈಎಸ್ ಪಿ ಪವನ್ ಕುಮಾರ್ ಸಲಹೆ ನೀಡಿದರು.

ತಾಲೂಕಿನ ದೊಡ್ಡರಾಯಪೇಟೆ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಎ.ಆರ್.ಎಸ್.ಟ್ರಸ್ಟ್ ದೊಡ್ಡರಾಯಪೇಟೆ, ಸಿಇಎನ್ ಪೊಲೀಸ್ ಠಾಣೆ ವತಿಯಿಂದ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ನಡೆದ ಸೈಬರ್ ಅಪರಾಧ ತಡೆ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸೈಬರ್ ಅಪರಾಧಗಳು ಯಾವುದೇ ಗಡಿ ಹೊಂದಿಲ್ಲ. ಸ್ಮಾರ್ಟ್‌ಫೋನ್ ಬಳಕೆ ಹೆಚ್ಚಾದ್ದರಿಂದ ವಂಚನೆ ಪ್ರಕರಣಗಳು ಹೆಚ್ಚಾಗಿವೆ. ಜನತೆ ಜಾಗೃತರಾಗಿ ತಮ್ಮನ್ನು ರಕ್ಷಿಸಿಕೊಳ್ಳಬೇಕು ಎಂದರು.

ಸ್ಮಾರ್ಟ್ ಫೋನ್ ಬಳಕೆಯಿಂದ ಉಪಯೋಗ ಇದ್ದು ಅಷ್ಟೇ ಅಪಾಯ ಇರುತ್ತದೆ. ಸ್ಮಾರ್ಟ್ ಫೋನ್ ಡ್ರಗ್ಸ್‌ಕ್ಕಿಂತಲೂ ಅಪಾಯಕಾರಿಯಾದದ್ದು ಆಗಾಗಿ ಇಂತಹ ಫೋನ್ ಗಳಿಂದ ಜನತೆ, ಹಾಗೂ ತಮ್ಮ ಮಕ್ಕಳನ್ನು ದೂರವಿರುವಂತೆ ನೋಡಿಕೊಳ್ಳಬೇಕು ಎಂದರು.

ಡಿಜಿಟಲ್ ಹೂಡಿಕೆಯಲ್ಲಿ ದುಪ್ಪಟ್ಟು ಹಣಕೊಡುತ್ತೇನೆ. ಕೆಲಸ ಕೊಡಿಸುತ್ತೇನೆ. ಮೋಸ ಆಗುತ್ತಿದೆ. ಡಿಜಿಟಲ್ ಆರೆಸ್ಟ್ ಮಾಡಲಾಗಿದೆ ಎಂದು ಫೋನ್ ಕರೆ ಬರುತ್ತದೆ ಇದರ ಬಗ್ಗೆಯೂ ಎಚ್ಚರಿಕೆ ವಹಿಸಬೇಕು. ಏನಾದರೂ ಅನುಮಾನ ಬಂದರೆ ಪೊಲೀಸ್ ಠಾಣೆಗೆ ತಿಳಿಸಬೇಕು. ಸೈಬರ್ ವಂಚನೆ ಬಗ್ಗೆ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ಟ್ರಸ್ಟ್ ನ ಕಾರ್ಯದರ್ಶಿ ವಕೀಲ ಅರುಣ್ ಕುಮಾರ್ ಪ್ರಾಸ್ತಾವಿಕ ವಾಗಿ ಮಾತನಾಡಿ, ನಮ್ಮ ಟ್ರಸ್ಟ್ ವತಿಯಿಂದ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬರಲಾಗಿದ್ದು, ಇಂದು ಎ.ಆರ್.ಎಸ್. ಟ್ರಸ್ಟ್ ದೊಡ್ಡರಾಯಪೇಟೆ, ಸಿಇಎನ್ ಪೊಲೀಸ್ ಠಾಣೆ ವತಿಯಿಂದ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಸೈಬರ್ ಅಪರಾಧ ತಡೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಟ್ರಸ್ಟ್ ನ ಅಧ್ಯಕ್ಷ ಡಾ.ಕೃಪಾಶಂಕರ್, ಯಜಮಾನರಾದ ಮಹದೇವಯ್ಯ,ಮಹದೇವಸ್ವಾಮಿ, ರಾಜಣ್ಣ,ಅಶೋಕ್, ಗ್ರಾಮ ಪಂಚಾಯತಿ ಸದಸ್ಯ ಸಿದ್ದರಾಜು, ಮುಖಂಡರಾದ ಜೋಸೆಫ್, ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಪ್ರತಾಪ್, ಆಟೋ ರಾಜು,ಪವನ್ ಮಹಿಳಾ ಸಂಘದ ಅನಿತಾ,ಸುವರ್ಣ ,ಜಯಲಕ್ಷ್ಮಿ, ಭಾಗ್ಯ, ನಾಗರತ್ನ,ಪವಿತ್ರ,ದೊಡ್ಡಮ್ಮ,ಸಾವಿತ್ರಮ್ಮ ಇತರರು ಹಾಜರಿದ್ದರು.

# ಸಿ.ಪುಟ್ಟರಂಗಶೆಟ್ಟರಿಗೆ ಸಚಿವ ಸ್ಥಾನ ನೀಡಿ



ಚಾಮರಾಜನಗರ, ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ 4 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಈ ಬಾರಿಯ ಸಚಿವ ಸಂಪುಟ ಪುನಾರಚನೆಯ ಸಂದರ್ಭದಲ್ಲಿ ಸಚಿವ ಸ್ಥಾನ ನೀಡಿ ಜಿಲ್ಲಾ ಉಸ್ತುವಾರಿ ನೀಡಬೇಕು ಕಾಂಗ್ರೆಸ್ ಮುಖಂಡ ಹೆಚ್.ಎಸ್. ನಾಗರಾಜು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಕಳೆದ ಬಾರಿಯೇ ಸಚಿವ ಸ್ಥಾನ ನೀಡಬೇಕಿತ್ತು. ಆದರೆ ಕೊನೆ ಗಳಿಗೆಯಲ್ಲಿ ಅವರ ಹೆಸರನ್ನು ಕೈ ಬಿಡಲಾಗಿತ್ತು. ಆದ್ದರಿಂದ ಮುಂದಿನ ಸಚಿವ ಸಂಪುಟ ವೇಳೆ ಸಚಿವ ಸ್ಥಾನ ನೀಡುವ ಮೂಲಕ ಉಪ್ಪಾರ ಜನಾಂಗಕ್ಕೆ ಸೂಕ್ತ ಪ್ರಾತಿನಿಧ್ಯ ನೀಡಬೇಕು ಎಂದು ಆಗ್ರಹಿಸಿದರು.

ಮುಖಂಡ ಜವರಯ್ಯ ಮಾತನಾಡಿ ಸರಳ, ಸಜ್ಜನಿಕೆ ವ್ಯಕ್ತಿತ್ವದ, ಸದಾ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುವ ಶಾಸಕ ಸಿ.ಪುಟ್ಟರಂಗ ಶೆಟ್ಟರಿಗೆ ಸಚಿವ ಸ್ಥಾನ ನೀಡಿದರೆ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಗೆಲ್ಲಲು ಸಹಕಾರಿಯಾಗಲಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಸಿದ್ದರಾಜು, ಅಂಬಿಕಾ, ಶಿವಕುಮಾರ್, ನಿಂಗರಾಜು, ಚೆನ್ನಬಸಪ್ಪ, ಸುಂದರ್ ಹಾಜರಿದ್ದರು.

## ಪೌರಕಾರ್ಮಿರಿಂದ ಸವೇರಾ ಪ್ಯಾರಡೈಸ್ ಹೋಟೆಲ್ ಉದ್ಘಾಟನೆ

ರಾಮನಗರ: ನಗರದ ಮುಖ್ಯರಸ್ತೆಯಲ್ಲಿ ನವೀಕೃತಗೊಂಡಿರುವ ಸವೇರಾ ಪ್ಯಾರಡೈಸ್ ಹೋಟೆಲ್ ಅನ್ನು ಪೌರಕಾರ್ಮಿಕರಿಂದ ಉದ್ಘಾಟಿಸಿದ್ದ ನಗರವಾಸಿಗಳ ಗಮನ ಸೆಳೆದಿದೆ.

ಕಳೆದ 14 ವರ್ಷಗಳಿಂದ ಸವೇರಾ ಹೋಟೆಲ್ ಕಾರ್ಯನಿರ್ವಹಿಸುತ್ತಿತ್ತು. ಇದೀಗ ನವೀಕೃತಗೊಂಡು ಅಧುನಿಕ ಗೆಟ್‌ಅಪ್‌ನಲ್ಲಿ ಮರು ಆರಂಭವಾಗಿದೆ. ಹೀಗೆ ನವೀಕೃತಗೊಂಡ ಹೋಟೆಲ್ ಅನ್ನು ಸ್ಥಳೀಯ ಪೌರಕಾರ್ಮಿಕರು ಉದ್ಘಾಟಿಸಿದ್ದು ವಿಶೇಷವಾಗಿತ್ತು. ಹೋಟೆಲ್‌ಅನ್ನು ಉದ್ಘಾಟಿಸಿದ ಪೌರಕಾರ್ಮಿಕರನ್ನು ಸನ್ಮಾನಿಸಿದ ಗೌರವಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಹೋಟೆಲ್‌ನ ಮಾಲೀಕ ನೂರ್, ನಮ್ಮ ರೈತರು, ನಮ್ಮ ಯೋಧರು ಎಷ್ಟು ಮುಖ್ಯವೋ ಅದೇ ರೀತಿ ನಮ್ಮ ಪೌರ ಕಾರ್ಮಿಕರು ಸಹ ಅಷ್ಟೇ ಮುಖ್ಯ. ನಾನು 14 ವರ್ಷಗಳಿಂದ ಸವೇರಾ ಹೋಟೆಲ್ ನಡೆಸುತ್ತಾ ಬಂದಿದ್ದೇನೆ. ಈಗ ಹೊಸದಾಗಿ ನವೀಕರಣ ಮಾಡಿ ಸವೇರಾ ಪ್ಯಾರಡೈಸ್ ಎಂಬ ಹೆಸರಿನಲ್ಲಿ ಹೊಸ ರೂಪ ಪಡೆದುಕೊಂಡಿದೆ, ಪೌರಕಾರ್ಮಿಕರಿಂದ ನಮ್ಮ ಹೋಟೆಲ್ ಉದ್ಘಾಟನೆ ಮಾಡಿಸುವ ಮಹದಾಸೆ ಇತ್ತು. ಇಂದು ನನ್ನ ಆಸೆ ನೆರವೇರಿದೆ ಎಂದು ಹರ್ಷ ವ್ಯಕ್ತಪಡಿಸಿದರು. ನಗರದ ಸ್ವಚ್ಛತೆ ಕಾಪಾಡುವ ಪೌರಕಾರ್ಮಿಕರು ವೈದ್ಯರಿಗೆ ಸಮಾನ. ಅವರಿಂದಾಗಿಯೇ ನಗರದ ನಾಗರೀಕರದಾದ ನಾವು ಅರೋಗ್ಯವಂತರಾಗಿದ್ದೇವೆ. ನಮ್ಮ ಮಕ್ಕಳ ಭವಿಷ್ಯ ಇವರ ಕೈಯಲ್ಲಿ ಇದೆ, ಅವರ ಶ್ರಮ ಅಪಾರ, ಅವರನ್ನು ಎಲ್ಲರು ಗೌರವಿಸಬೇಕಿದೆ ಎಂದ ಅವರು ನಾಗರೀಕರು ಯಾವುದೇ ಕಾರಣಕ್ಕೂ ಎಲ್ಲಂದರಲ್ಲಿ ಕಸ ಬಿಸಾಡಬಾರದು, ನಗರಸಭೆಯ ವಾಹನಕ್ಕ ಕೊಡಬೇಕು. ಹೀಗೆ ಮಾಡುವುದರಿಂದ ನಮ್ಮ ರಸ್ತೆ, ಚರಂಡಿಗಳು ಸಹ ಕಲ್ಮಶ ಮುಕ್ತವಾಗಿರುತ್ತವೆ ಎಂದರು.

ಈ ವೇಳೆ ಪೌರ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ನಾಗರಾಜು (ಬೆಂಕಿ), ಜಿಲ್ಲಾಧ್ಯಕ್ಷ ವಿ.ವೆಂಕಟೇಶ್, ಶಾಖಾ ಅಧ್ಯಕ್ಷ ದೇವೇಂದ್ರ, ಗೌರವ ಅಧ್ಯಕ್ಷ ಗುರುಸ್ವಾಮಿ, ಪ್ರಮುಖರಾದ ಕೊಲ್ಲಾಪುರಿ ಸೇರಿದಂತೆ ಇನ್ನಿತರರು ಹಾಜರಿದ್ದರು.



## ಹಾವಿನ ಕಡಿತಕ್ಕೆ ಮಹಿಳೆ ಸಾವು:

ಚಾಮರಾಜನಗರ, ಯಳಂದೂರು ತಾಲೂಕಿನ ಅಲ್ಕೆರೆ ಅಗ್ರಹಾರ ಗ್ರಾಮ ದಲ್ಲಿ ಹಾವು ಕಡಿತಕ್ಕೆ ಕೂಲಿ ಕಾರ್ಮಿಕ ಮಹಿಳೆಯೊಬ್ಬಳು ಮೃತಪಟ್ಟ ಘಟನೆ ನಡೆದಿದೆ. ಅಲ್ಕೆರೆ ಅಗ್ರಹಾರ ಗ್ರಾಮದ ಮಹೇಶ್ ಎಂಬುವರ ಪತ್ನಿ ಮಹಾದೇವಿ(35) ಮೃತರು. ಜಮೀನೊಂದಕ್ಕೆ ಕೂಲಿ ಕೆಲಸಕ್ಕೆ ತೆರಳಿದ್ದಾಗ ಮಹಾದೇವಿಗೆ ಹಾವು ಕಚ್ಚಿದ್ದು, ಕೂಡಲೇ ಯಳಂದೂರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆತಂದರಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮಹಾದೇವಿ ಮೃತಪಟ್ಟಿರುವುದಾಗಿ ಮಾಹಿತಿ ಲಭ್ಯವಾಗಿದೆ. ಯಳಂದೂರು ಪಟ್ಟಣದ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ. ಮತ್ತೊಂದು ಹಾವಿನ ಕಡಿತ ಘಟನೆ ಯಳಂದೂರು ತಾಲೂಕಿನ ಕೆ. ಹೊಸೂರು ಸಮೀಪ ನಡೆದಿದ್ದು, ಗ್ರಾಮದ ಮಹೇಶ್ ಎಂಬ ಯುವಕ ಬೈಕ್?ನಲ್ಲಿ ಬರುತ್ತಿದ್ದಾಗ ಹಾವು ಕಚ್ಚಿದ್ದು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಕಾಡಾನೆ ದಾಳಿ ವ್ಯಕ್ತಿ ಪಾರು

ಚಾಮರಾಜನಗರ, ಮೂಲೆಹೊಳೆ – ವಯನಾಡು ರಸ್ತೆಯಲ್ಲಿ ಕಾಡಾನೆ ದಾಳಿಯಿಂದ ಕೂದಲೆಳೆ ಅಂತರದಲ್ಲಿ ಬೈಕ್ ಸವಾರನೊಬ್ಬ ಪಾರಾಗಿದ್ದಾನೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲೆಹೊಳೆಯಿಂದ ವಯನಾಡು ತೆರಳುವ ಮಾರ್ಗದಲ್ಲಿ ಈ ಘಟನೆ ನಡೆದಿದ್ದು ಕಾರಿನಲ್ಲಿ ತೆರಳುತ್ತಿದ್ದ ಪ್ರಯಾಣಿಕನ ಮೊಬೈಲ್ ಕ್ಯಾಮರಾದಲ್ಲಿ ದಾಳಿಯ ವಿಡಿಯೋ ಸೆರೆಯಾಗಿದೆ. ಆನೆ ದಾಳಿ ಮಾಡುತ್ತಿದ್ದಂತೆ ಬೈಕ್ ಬಿಟ್ಟು ಸವಾರ ಓಡಿ ಬಚಾವಾಗಿದ್ದು, ಬಳಿಕ ಆನೆಯೂ ಕೂಡ ತೆರಳಿದೆ.

# ನವೆಂಬರ್ 28ರಂದು ಗೃಹಲಕ್ಷ್ಮಿ ಸಹಕಾರ ವಿವಿಧೋದ್ದೇಶ ಸಹಕಾರ ಬ್ಯಾಂಕ್‌ಗೆ ಚಾಲನೆ

## ಪೂರ್ವ ಭಾವಿ ಸಭೆಯಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಾಹಿತಿ

ರಾಮನಗರ: ಇದೇ ನ.28ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಐಸಿಡಿಎಸ್ ಸುವರ್ಣ ಮಹೋತ್ಸವ, ಅಕ್ಕಪಡೆ ಲೋಕಾರ್ಪಣೆ ಮತ್ತು ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಬ್ಯಾಂಕ್‌ಗೆ ಚಾಲನೆ ನೀಡುವ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನೆರವೇರಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದರು.

ನಗರದಲ್ಲಿರುವ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಕರ್ನಾಟಕದಲ್ಲಿ ಅಂಗನವಾಡಿ ವ್ಯವಸ್ಥೆ ಆರಂಭವಾಗಿ 50 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಇದೊಂದು ಮೂರು ಯೋಜನೆಗಳ ಹೊಸ ಇತಿಹಾಸ ಸೃಷ್ಟಿಸುವ ಕಾರ್ಯಕ್ರಮವಾಗಲಿದೆ. ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

**ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಬದ್ಧ**

ಪ್ರಸ್ತುತ ಸರ್ಕಾರ ಅಂದರೆ ಗ್ಯಾರಂಟಿ ಸರ್ಕಾರ ಅಂತ ಅರ್ಥ. ತಮ್ಮ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲಾ ಮಹಿಳೆಯರ ಪರ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಇಡೀ ದೇಶವೇ ಬಡತನದಿಂದ ಬಳಲುತ್ತಿದ್ದ ವೇಳೆ ಬಡ ಮಕ್ಕಳಿಗೂ ಪೌಷ್ಠಿಕ ಆಹಾರ ಸಿಗಬೇಕು, ಜೊತೆಗೆ ಶಿಕ್ಷಣ ಕೂಡ ಸಿಗಬೇಕು ಎನ್ನುವ ದೃಷ್ಟಿಯಿಂದ 1975ರಲ್ಲಿ ಪ್ರಧಾನಿಗಳಾಗಿದ್ದ ಇಂದಿರಾ ಗಾಂಧಿಯವರು ಪ್ರಥಮವಾಗಿ ಮೈಸೂರು ಜಿಲ್ಲೆಯಲ್ಲಿ ಅಂಗನವಾಡಿ ಆರಂಭಿಸಿದರು. ಈ ವ್ಯವಸ್ಥೆ ಆರಂಭವಾಗಿ 50 ವರ್ಷ ಪೂರೈಸಿದೆ. ಹಾಗಾಗಿ ನ.28ರಂದು ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿದೆ, ಅಂದು ಸರ್ಕಾರಿ ಶಾಲೆಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ ತರಗತಿಗಳ ಆರಂಭಕ್ಕೂ ಚಾಲನೆ ಸಿಗಲಿದೆ ಎಂದರು.



**ಕಾರ್ಯಕರ್ತೆಯರ ಗೌರವ ಧನ 1 ಸಾವಿರ ಏರಿಸಲು ಪ್ರಸ್ತಾವನೆ**

ನಮ್ಮ ಸರ್ಕಾರವು ಕಳೆದ ಬಾರಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಗೌರವ ಧನವನ್ನು 1000 ರೂಪಾಯಿ ಹೆಚ್ಚಿಸಿದೆ. ಶೀಘ್ರವೇ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮತ್ತೊಂದು ಸಾವಿರ ಹೆಚ್ಚಿಸುವಂತೆ ಮನವಿ ಮಾಡಲಾಗುವುದು. ಇದೇ ನಮ್ಮ ಸರ್ಕಾರದ ಮತ್ತೊಂದು ಗ್ಯಾರಂಟಿ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಅಂಧ ವಿದ್ಯಾರ್ಥಿಗೆ ಲ್ಯಾಪ್ ಟಾಪ್ ವಿತರಿಸಲಾಯಿತು. ಸೀಮಂತ ಕಾರ್ಯಕ್ರಮ ಹಾಗೂ ಅತ್ಯುತ್ತಮ ಅಂಗನವಾಡಿ ಕಾರ್ಯಕರ್ತೆ ಯರು ಹಾಗೂ ಸಹಾಯಕಿಯರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ರಾಮನಗರ ವಿಧಾನ ಸಭಾ ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್, ವಿಧಾನ ಪರಿಷತ್ ಸದಸ್ಯ ಎಸ್. ರವಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ. ರಾಜು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷ ಗಂಗಾಧರ್, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಟರಾಜು ಗಾಣಕಲ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚೇತನ್ ಕುಮಾರ್, ತಾಲೂಕುಗಳ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ದಿನೇಶ್ ಜೆ.ಆರ್. ಸೇರಿದಂತೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಉಪಸ್ಥಿತರಿದ್ದರು.

### ಗೃಹಲಕ್ಷ್ಮೀ ಫಲಾನುಭವಿಗಳು ಷೇರುದಾರರು

**ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 2.80 ಲಕ್ಷ ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿದ್ದಾರೆ. ಈ ಪೈಕಿ ಕನಿಷ್ಠ 2.50 ಲಕ್ಷ ಫಲಾನುಭವಿಗಳನ್ನು ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರಿ ಸಂಘಕ್ಕೆ ಷೇರುದಾರರನ್ನಾಗಿ ಮಾಡಬೇಕು. ಗೃಹಲಕ್ಷ್ಮಿ ಯೋಜನೆಯ ಯಶಸ್ಸಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು, ಸೂಪರ್‌ವೈಸರ್‌ಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರೆ ಕಾರಣ. ಅದೇ ರೀತಿ ಗೃಹಲಕ್ಷ್ಮಿ ಬ್ಯಾಂಕ್ ಕೂಡ ಮನೆ ಮನೆ ತಲುಪುವಂತಾಗಬೇಕು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಹೇಳಿದರು.**

# ಅನರ್ಹ ಬಿಪಿಎಲ್ ಕಾರ್ಡುಗಳನ್ನು ಮರುಸ್ಥಾಪಿಸಲು ಅವಕಾಶ

ರಾಮನಗರ: ಅನರ್ಹ ಎಂದು ಗುರುತಿಸಿರುವ ಬಿಪಿಎಲ್ ಕಾರ್ಡುಗಳಿಗೆ ಅಗತ್ಯ ದಾಖಲೆಗಳನ್ನು ಒದಗಿಸಿದಲ್ಲಿ ಅಂತಹ ಕಾರ್ಡುಗಳನ್ನು ಮುಂದುವರೆಸಲು ಅವಕಾಶವಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ರಾಜು ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ 15,053 ಅನರ್ಹ ಬಿಪಿಎಲ್ ಕಾರ್ಡುಗಳನ್ನು ಗುರುತಿಸಲಾಗಿದೆ. ಈ ಪೈಕಿ 6583 ಕಾರ್ಡುಗಳನ್ನು ಎಪಿಎಲ್ ಕಾರ್ಡುಗಳಾಗಿ ಪರಿವರ್ತನೆಯಾಗಿವೆ. ಅರ್ಹ ಪಡಿತರದಾರರು 45 ದಿನಗಳಲ್ಲಿ ಅಗತ್ಯ ದಾಖಲೆಗಳನ್ನು ಆಯಾ ತಾಲ್ಲೂಕು ತಹಸೀಲ್ದಾರರುಗಳಿಗೆ ಮನವಿಯೊಂದಿಗೆ ಒದಗಿಸಿ ಎಂದು ಅವರು ತಿಳಿಸಿದ್ದಾರೆ.




ತಹಸೀಲ್ದಾರ್ ಅವರಿಗೆ ಸಲ್ಲಿಕೆಯಾದ ಮನವಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಬಿಪಿಎಲ್ ಕಾರ್ಡ್ ಹೊಂದಲು ನಿಯಮಾನುಸಾರ ಅರ್ಹರಿದ್ದಲ್ಲಿ ಅಂತಹವರ ಬಿಪಿಎಲ್ ಕಾರ್ಡ್ ಅನ್ನು ಮರು ಸ್ಥಾಪಿಸಲಾಗುತ್ತದೆ. ಹಾಗೊಂದು ವೇಳೆ ಅನರ್ಹರು ಹೊಂದಿರುವ ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್ ಕಾರ್ಡ್‌ಗಳನ್ನಾಗಿ ಪರಿವರ್ತಿಸಿದ ನಂತರ ಯಾವುದೇ ಆಕ್ಷೇಪಣೆ ಸಲ್ಲಿಕೆಯಾಗದಿದ್ದರೆ ಅಂತಹ ಪಡಿತರ ಚೀಟಿಗಳನ್ನು ಎಪಿಎಲ್ ಕಾರ್ಡ್‌ಗಳನ್ನಾಗಿ ಮುಂದುವರೆಸಲಾಗುತ್ತದೆ ಎಂದು ಹೇಳಿದರು.

ಎಪಿಎಲ್ ಆಗಿ ಪರಿವರ್ತನೆಯಾದ 6583 ಕಾರ್ಡುಗಳ ಪೈಕಿ 845 ಕಾರ್ಡ್‌ಗಳನ್ನು ಬಿಪಿಎಲ್ ಆಗಿ ಮರು ಸ್ಥಾಪಿಸಲಾಗಿದ್ದು, 85 ಕಾರ್ಡ್‌ಗಳನ್ನು ರದ್ದು ಮಾಡಲಾಗಿದೆ. 163 ಕಾರ್ಡ್‌ಗಳು ಅನುಮಾನಾಸ್ಪದವಾಗಿದ್ದರೆ, 7676 ಚೀಟಿಗಳು ಪರಿಶೀಲನಾ ಹಂತದಲ್ಲಿವೆ ಎಂದು ಅವರು ತಿಳಿಸಿದರು. ಕೇಂದ್ರ ಸರ್ಕಾರವು ನಿಗದಿ ಪಡಿಸಿರುವ ಎನ್ ಎಫ್ ಎಸ್ ಎ ಮಿತಿಗಿಂತ ಹೆಚ್ಚಿನ ಪಡಿತರ ಫಲಾನುಭವಿಗಳಿದ್ದಾರೆ. ಹೀಗಾಗಿ ಬಿಪಿಎಲ್ ಚೀಟಿಗಳಲ್ಲಿ ಅನರ್ಹರನ್ನು ಮಾನದಂಡಗಳನ್ವಯ ಕೈಬಿಡಲು ಉದ್ದೇಶಿಸಲಾಗಿದೆ. ಈ ಕಾರಣದಿಂದಲೇ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಸಭೆಯಲ್ಲಿ ಪ್ರಾಧಿಕಾರ ಉಪಾಧ್ಯಕ್ಷರಾದ ಎಸ್.ಸಿ.ಶೇಖರ್ , ಶಿವಪ್ರಸಾದ್ , ತಾಲೂಕು ಅಧ್ಯಕ್ಷ ವಿ.ಎಚ್.ರಾಜು, ಸದಸ್ಯರಾದ ಜಯಣ್ಣ, ಕಾಳಮ್ಮ, ಶೋಭಾ, ವನಜಾಕ್ಷಿ, ಎಂ.ಮಹದೇವು ಮತ್ತಿತರರು ಉಪಸ್ಥಿತರಿದ್ದರು.

# ಮುಖ್ಯಮಂತ್ರಿ ರಾಜಕೀಯ ಪ್ರೇರಿತ ನಾಟಕ



ಚಾಮರಾಜನಗರ, ಆಕ್ಸಿಜನ್ ದುರಂತದಲ್ಲಿ ಸಾವಿಗೀಡಾದ ಸಂತ್ರಸ್ತ ಕುಟುಂಬದವರಿಗೆ ಪರಿಹಾರ ಹಾಗೂ ಸರಕಾರಿ ನೌಕರಿ ನೀಡದೇ ಸತಾಯಿಸುತ್ತಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ರಾಜಕೀಯ ಪ್ರೇರಿತ ನಾಟಕ ಆಡುತ್ತಿದ್ದಾರೆ ಎಂದು ಎಸ್‌ಡಿಪಿಐ ರಾಜ್ಯ ಕಾರ್ಯ ಕಾರಿ ಸಮಿತಿ ಸದಸ್ಯ ಅಬ್ರಹಾರ್ ಅಮದ್ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಆಕ್ಸಿಜನ್ ದುರಂತದಲ್ಲಿ ಮಡಿದ ಕುಟುಂಬದ ಸದಸ್ಯರಿಗೆ ಇಲ್ಲಿತನಕ ನ್ಯಾಯ ದೊರೆತ್ತಿಲ್ಲ. ಕ್ಯಾಬಿನೆಟ್ ನಲ್ಲಿ ಈ ಬಗ್ಗೆ ಚರ್ಚೆ ನಡೆದಿರುವುದನ್ನು ಬಿಟ್ಟರೆ ಆದೇಶ ಬಂದಿಲ್ಲ ಎಂದು ದೂರಿದರು. ಮುಖ್ಯಮಂತ್ರಿ ಭೇಟಿಗೆ ಅವಕಾಶ ನೀಡಬೇಕು: ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ ಕುಟುಂಬದ ಸದಸ್ಯರಿಗೆ ಉದ್ಯೋಗ ದೊರಕಿಸಿಕೊಡದಿರುವ ಬಗ್ಗೆ ಮುಖ್ಯಮಂತ್ರಿ ಗಳನ್ನು ಭೇಟಿ ಮಾಡಿ ಪ್ರಶ್ನಿಸಲು ಜಿಲ್ಲಾಧಿಕಾರಿಗಳು ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದರು.

**ಅಭಿವೃದ್ಧಿ ಕಾರ್ಯ ಶೂನ್ಯ:** ಕಳೆದ ಎರಡೂವರೆ ವರ್ಷಗಳಲ್ಲಿ ಚಾಮರಾಜನಗರ ಜಿಲ್ಲೆಗೆ ಕೊಟ್ಟಿರುವ ಕೊಡುಗೆ ಏನು ಎಂದು ಪ್ರಶ್ನಿಸಿದ ಅವರು ಕೇವಲ ರಾಜಕೀಯ ಲಾಭಕ್ಕಾಗಿ ಚಾಮರಾಜನಗರಕ್ಕೆ ಆಗಮಿಸಿದರೆ ಸಾಲದು ಅಭಿವೃದ್ಧಿ ಕೆಲಸಗಳಿಗೆ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು. ಗ್ಯಾರೆಂಟಿ ಯೋಜನೆಗಳಿಂದ ಜೀವನ ಸಾಗುವುದಿಲ್ಲ ಆಗಾಗಿ ಹಿಂದುಳಿದ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿ ಗೆ ಆದ್ಯತೆ ನೀಡುವಂತೆ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಡಿಪಿಐನ ಜೊಲ್ಲಾಧ್ಯಕ್ಷ ಖಲೀಲ್ ಉಲ್ಲಾ, ಜಿಲ್ಲಾ ಉಪಾಧ್ಯಕ್ಷ ನಯಾಜ್ ಉಲ್ಲಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್, ಹಿಲ್ಲಾ ಕಾರ್ಯದರ್ಶಿ ಜಬೀನೂರ್, ನಗರ ಘಟಕದ ಅಧ್ಯಕ್ಷ ಮಹರ್ ಖಾನ್ ಹಾಜರಿದ್ದರು.

**ಓರ್ವ ಸಾವು, ಮತ್ತೋರ್ವ ಪಾರು**

# ಚಾ.ನಗರ: ಬೈಕ್ ಸವಾರರ ಮೇಲೆ ಕಾಡಾನೆ ದಾಳಿ

ಚಾಮರಾಜನಗರ, ಬೈಕ್ ಸವಾರರ ಮೇಲೆ ಕಾಡಾನೆ ದಾಳಿ ನಡೆಸಿ ಓರ್ವನನ್ನು ಬಲಿ ಪಡೆದ ಘಟನೆ ಹನೂರು ತಾಲೂಕಿನ ನೆಲ್ಲಿಕತ್ರಿಯಲ್ಲಿ ಮಂಗಳವಾರ ನಡೆದಿದೆ. ತಾಲೂಕಿನ ಪಿ.ಜಿ. ಪಾಳ್ಯ ಗ್ರಾಮ ಪಂಚಾಯತ್? ವ್ಯಾಪ್ತಿಯ ಗೊಂಬೆಗಲ್ಲು ಗ್ರಾಮದ ಕೇತೆಗೌಡ ಆನೆ



ದಾಳಿಯಿಂದ ಮೃತಪಟ್ಟಿರುವ ವ್ಯಕ್ತಿ.

ಗೊಂಬೆಗಲ್ಲು ಗ್ರಾಮದಿಂದ ಕಾರ್ಯನಿಮಿತ್ತ ಒಡೆಯರ ಪಾಳ್ಯಕ್ಕೆ ಬೈಕ್?ನಲ್ಲಿ ತೆರಳುತ್ತಿದ್ದಾಗ ನೆಲ್ಲಿಕತ್ರಿ ಸಮೀಪ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಪರಿಣಾಮ ಕೇತೆಗೌಡ ಸ್ಥಳದಲ್ಲೇ ಮೃತಪಟ್ಟಿದ್ದು, ಕೊಲ್ಲ @ ವೀರೇಗೌಡ ಎಂಬವರು ಸ್ವಲ್ಪದರಲ್ಲೇ ಪಾರಾಗಿದ್ದಾರೆ. ವಿಚಾರ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಬಿ ಆರ್ ಟಿ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಶ್ರೀಪತಿ ಹಾಗೂ ಸಿಬ್ಬಂದಿ ಭೇಟಿ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮರಣೋತ್ತರ ಪರೀಕ್ಷೆಗೆ ಹನೂರು ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿದ್ದ ಸಂದರ್ಭದಲ್ಲಿ



ಮೃತ ಕೇತೆಗೌಡ ಅವರ ಪುತ್ರ ಜಡೇಸ್ವಾಮಿಗೆ ಸರ್ಕಾರದ ವತಿಯಿಂದ ಮೊದಲ ಹಂತದ ಪರಿಹಾರ 5 ಲಕ್ಷದ ಚೆಕ್ ಅನ್ನು ಡಿಸಿಎಫ್ ಶ್ರೀಪತಿ ಹಾಗೂ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ರಾಜೇಶ್ ಸಮ್ಮುಖದಲ್ಲಿ ವಿತರಣೆ ಮಾಡಲಾಯಿತು.

ಚೆಕ್ ವಿತರಣೆ ಬಳಿಕ ಡಿಸಿಎಫ್ ಶ್ರೀಪತಿ ಅವರು ಮಾತನಾಡಿ, ಕೇತೆಗೌಡರು ಕಾಡಾನೆ ದಾಳಿಯಿಂದ ಮೃತಪಟ್ಟಿರುವುದು ನೋವನ್ನುಂಟು ಮಾಡಿದೆ. ಸರ್ಕಾರದ ವತಿಯಿಂದ 20 ಲಕ್ಷ ರೂಪಾಯಿ ಪರಿಹಾರ ನೀಡಲಾಗುತ್ತದೆ. ಮೊದಲ ಹಂತದಲ್ಲಿ 5 ಲಕ್ಷ ಪರಿಹಾರ ನೀಡಲಾಗಿದ್ದು, ದಾಖಲಾತಿ ಹಾಗೂ ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಉಳಿದ 15 ಲಕ್ಷ ಹಣ ನೀಡಲಾಗುತ್ತದೆ. ಪರಿಹಾರದ ಹಣವನ್ನು ಪೋಲು ಮಾಡದೆ ತಮ್ಮ ಮಕ್ಕಳ ಹೆಸರಿನಲ್ಲಿ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇರಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು ಎಂದು ಸಲಹೆ ನೀಡಿದರು.


## ಕರುನಾಡ ಏಕೀಕರಣಕ್ಕೆ ದುಡಿದ ಮಹನೀಯ, ಕನ್ನಡದ ಕಟ್ಟಾಳು ಶ್ರೀ ಆಲೂರು ವೆಂಕಟರಾಯರು

ಕನ್ನಡದಲ್ಲಿ ಏನಿದೆ ಎಂದವರಿಗೆ, ಕನ್ನಡದಲ್ಲಿ ಏನಿಲ್ಲಎಂದು ದಿಟ್ಟವಾಗಿ ಉತ್ತರಿಸಿದವರು, ಕನ್ನಡ ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಗೆ ತಮ್ಮ ಜೀವನನ್ನು ಮೀಸಲಿಟ್ಟವರು, ಸ್ಥಳೀಯ ಪತ್ರಿಕೋದ್ಯಮ, ಅನನ್ಯ ಕೊಡುಗೆ ನೀಡಿದವರು ಶ್ರೀಯುತ ಆಲೂರು ವೆಂಕಟರಾಯರು. ಕರ್ನಾಟಕ ಏಕೀಕರಣದ ನೆಲೆಯಲ್ಲಿ ಅವರು ಮಾಡಿದ ಕೆಲಸ ಅವಿಸ್ಮರಣೀಯ. ಅವರ ಈ ಸೇವೆಗಾಗಿ ಅವರನ್ನು ಕನ್ನಡದ ಕುಲಪುರೋಹಿತ ಎಂಬ ಹೆಸರಿನಿಂದ ಗೌರವಿಸುತ್ತೇವೆ.

ದಿನಾಂಕ 12.07.1880 ರಂದು ಅಂದಿನ ವಿಜಾಪುರದಲ್ಲಿ ಭೀಮರಾವ್ ಮತ್ತು ಭಾಗೀರಥಿಬಾಯಿ ದಂಪತಿಗಳ ಪುತ್ರನಾಗಿ ಜನಿಸಿದವರು ವೆಂಕಟರಾಯರು. ಇವರ ಪ್ರಾಥಮಿಕ ಶಿಕ್ಷಣ ನವಲಗುಂದ, ಗದಗ, ಹಾನಗಲ್ಲ ಹಾಗು ಮೆಟ್ರಿಕ್ ಪರೀಕ್ಷೆಯನ್ನು 1897ರಲ್ಲಿ ಧಾರವಾಡದಲ್ಲಿ ಪೂರ್ಣಗೊಳಿಸಿ, ಪುಣೆಯ ಬಿ.ಎ ಮತ್ತು ಮುಂಬೈಯಲ್ಲಿ ಎಲ್.ಎಲ್.ಬಿ. ಪದವಿಯನ್ನು ಪಡೆದ ಬಳಿಕ ಧಾರವಾಡಕ್ಕೆ ಹಿಂದಿರುಗಿದರು. 1905ರಲ್ಲಿ ಹಂಪೆಯ ದರ್ಶನ ಮತ್ತು ವಂಗಭಂಗ ಚಳುವಳಿಗಳು ಆಲೂರರ ಬದುಕಿನ ಮೇಲೆ ಅತ್ಯಂತ ಪ್ರಭಾವ ಬೀರಿತು. ಇದನ್ನು ಪುಷ್ಟಿಕರಿಸುವುದು ಸ್ವತಃ ವೆಂಕಟರಾಯರೇ ಬರೆದ ಸಾಲುಗಳು, ವಿಜಯನಗರವು ವಿಸ್ತಾರವಾಗಿ ಪತ್ಯಕ್ಷವಾಗಿ ನನ್ನ ಕಣ್ಣಮುಂದೆ ಬಿದ್ದಿದೆ. ವಿಜಯನಗರವನ್ನು ದರ್ಶನ ಮಾಡಿದ ಬಳಿಕ ನನ್ನ ಹೃದಯದಲ್ಲಿ ಕರ್ನಾಟಕ ದೇವಿಯ ಸುಂದರ ಚಿತ್ರ ಮೂಡಿತು. ಅಂದಿನ ದಿನ ನನ್ನ ಜೀವನದಲ್ಲಿ ಕ್ರಾಂತಿಯನ್ನು ಮಾಡಲು ಕಾರಣವಾಯಿತು. ರಾಯರು ಹಿಂದುತ್ವ ಮತ್ತು ಕರ್ನಾಟಕತ್ವದ ಸಲುವಾಗಿ ದುಡಿಯಲು ನಿರ್ಧರಿಸಿದರು ಹಾಗೆ ಶ್ರಮಿಸಿದರು.



.ವೆಂಕಟರಾಯರು ಸ್ವದೇಶಿ ಚಳುವಳಿ ಮತ್ತು ಕಾಯಿದೆಭಂಗ ಚಳುವಳಿಯಲ್ಲಿ ಸಕ್ರಿಯರಾಗಿದ್ದರು ಹಾಗು ಬಾಲಗಂಗಾಧರ ತಿಲಕರನ್ನು ಇಲ್ಲಿಗೆ ಬರಮಾಡಿಕೊಂಡು ಅವರ ಉಪನ್ಯಾಸಗಳನ್ನು ಏರ್ಪಡಿಸಿದರು. ಕುವೆಂಪು, ಶ್ರೀರಂಗ, ಬೆಟಗೇರಿ ಕೃಷ್ಣಶರ್ಮ, ಶಿವರಾಮ ಕಾರಂತ, ಅ.ನ.ಕೃಷ್ಣರಾಯ ಮೊದಲಾದವರಿಗೆ ಕನ್ನಡದಲ್ಲಿ ಸಾಹಿತ್ಯ ನಿರ್ಮಿಸಲು ಪ್ರೇರಣೆಯಾದರು ಮತ್ತು ದ.ರಾ. ಬೇಂದ್ರೆಯವರ ಮೊದಲ ಕೃತಿ ಕೃಷ್ಣಾಕುಮಾರಿಯನ್ನು ಪ್ರಕಟಿಸಿ, ಬೇಂದ್ರೆಯವರನ್ನು ಸಾರ್ವಜನಿಕವಾಗಿ ಮೊದಲ ಬಾರಿಗೆ ಪರಿಚಯಿಸಿದ ಕೀರ್ತಿ ವೆಂಕಟರಾಯರಿಗೆ ಸಲ್ಲುತ್ತದೆ.



ಕ್ರಿ.ಶ. 1900, ಮುಂಬಯಿ ಪ್ರಾಂತ್ಯದ ಕನ್ನಡ ನಾಡಿನ ಗಡಿ ಪ್ರದೇಶಗಳಲ್ಲಿ ಮರಾಠಿ ಭಾಷೆಯ ಪ್ರಾಬಲ್ಯ ಹೆಚ್ಚಿತ್ತು. ವೆಂಕಟರಾಯರ ಮತ್ತು ಇತರ ಸಮಾನ ಮನಸ್ಕರ ಹೋರಾಟದ ಫಲ ಕನ್ನಡ ಶಾಲೆಗಳು ಅಲ್ಲಿ ತೆರೆಯಿತು. ಆಗ ಕನ್ನಡದ ಪರಿಸ್ಥಿತಿ ಹೇಳುವಷ್ಟು ಉತ್ತಮವಾಗಿರಲಿಲ್ಲ. ಮೈಸೂರು ಪ್ರಾಂತ್ಯಕ್ಕಿಂತ ಧಾರವಾಡ ಪ್ರದೇಶದಲ್ಲಿ ಕನ್ನಡದ ಬಗೆಗಿನ ಎಚ್ಚರ ಸಾಕಷ್ಟು ತೀವ್ರ ಸ್ವರೂಪವನ್ನುಮ ಪಡೆದುಕೊಂಡಿತ್ತು. 1906ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ವಾಗ್ಭೂಷಣ ಪತ್ರಿಕೆ ಆರಂಭವಾಗಿ, ಇದರ ಸಂಪಾದಕರಾಗಿ ಆಲೂರು ವೆಂಕಟರಾಯರು ನಿಯುಕ್ತರಾದ ಮೇಲೆ ಕನ್ನಡ ನಾಡಿನ ಏಕೀಕರಣಕ್ಕೆ ಸಂಬಂಧಿಸಿದ ತಮ್ಮ ಆಲೋಚನೆಗಳಿಗೆ ಪುಷ್ಟಿದೊರೆಯಿತು, ಪತ್ರಿಕೆಯ ಮೂಲಕ ಇದನ್ನು ಪ್ರಕಟಿಸಿ ಕನ್ನಡಿಗರನ್ನು ಎಚ್ಚರಿಸಿದರಲ್ಲದೆ, ಕರ್ನಾಟಕವು ಒಂದೇ ಎಂದು ಘೋಷಿಸಿಸಲು ಇದು ಸಹಾಯಕಾರಿಯಿತು.


ಹಂ. ಶ್ರೀ. ಸೂರ್ಯ ಪ್ರಕಾಶ್. ಬೆಂಗಳೂರು

1907ರಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಸಂಘಟಿಸಿದರು. ಇದರ ಮುಂದುವರಿದ ಭಾಗವಾಗಿ 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಯಿತೆಂಬುದು ಇತಿಹಾಸ.

1922ರಲ್ಲಿ ಆರಂಭವಾದ ಪತ್ರಿಕೆ ಜಯ ಕರ್ನಾಟಕ, ಕನ್ನಡ ನಾಡು, ನುಡಿಗೆ ಸಂಬಂಧಿಸಿ ಚರ್ಚಿಸಲು ವೆಂಕಟರಾಯಾರಿಗೆ ಗಂಭೀರ ವೇದಿಕೆಯಾಯಿತು ಮತ್ತು ಕನ್ನಡ ನವೋದಯ ಸಾಹಿತ್ಯ ರೂಪುಗೊಳ್ಳುವಲ್ಲಿ ಮಹತ್ವದ ಪಾತ್ರವನ್ನು ಇದು ವಹಿಸಿತು. 1914ರಲ್ಲಿ ಧಾರವಾಡದಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವನ್ನು ಸ್ಥಾಪಿಸಿ, ಪ್ರಥಮ ಅಧ್ಯಕ್ಷರಾಗಿ, ಕರ್ನಾಟಕ ಗತವೈಭವ ಗ್ರಂಥವನ್ನು ಪ್ರಕಟಿಸಿದರು. ಈ ಕೃತಿಯಲ್ಲಿ ಅವರ ಮನೋಧರ್ಮ ಸ್ಪಷ್ಟವಾಗಿ ವ್ಯಕ್ತವಾಗಿದೆ ನಾನು ಕನ್ನಡಿಗ. ಕರ್ನಾಟಕವು ನನ್ನದು ಎಂಬ ಸದ್ವಿಚಾರ ತರಂಗಗಳಿಂದ ಯಾವನ ಹೃದಯವು ಆತ್ಮಾನಂದದಿಂದ ಪುಳಕಿತಗೊಳ್ಳುವುದಿಲ್ಲವೋ, ಕನ್ನಡ ತಾಯಿಗೆ ಈಗ ಬಂದೊದಗಿರುವ ವಿಷಮ ಸ್ಥಿತಿಯಲ್ಲಿ ಯಾರ ಹೃದಯವು ತಲ್ಲಣಿಸುವುದಿಲ್ಲವೋ ಅದು ಹೃದಯವಲ್ಲ. ಕಲ್ಲಿನ ಬಂಡೆ. ದೇಹವಲ್ಲ. ಮೋಟುಮರ ಇದು ಅವರ ಮುಂದಿನ ಹೊರಾಟಕ್ಕೆ ನಾಂದಿಯಾಯಿತು. ಕರ್ನಾಟಕ ವೀರರತ್ನಗಳು, ಕರ್ನಾಟಕತ್ವದ ಸೂತ್ರಗಳು, ಕರ್ನಾಟಕತ್ವದ ವಿಕಾಸ ಕೃತಿಗಳು, ಅವರು ಬರೆದ ಗ್ರಂಥಗಳಾಗಿವೆ.

1956ರಂದು ಕರ್ನಾಟಕದ ಏಕೀಕರಣವಾಗಿ ಕನ್ನಡ ನಾಡಿನ ಉದಯವಾದಾಗ ಆಲೂರರು ಮೈಸೂರು ರಾಜ್ಯ ಎಂಬುದರ ಬದಲು ಕರ್ನಾಟಕ ರಾಜ್ಯವೆಂದು ಕರೆದರು. ಕರ್ನಾಟಕದ ಏಕೀಕರಣವಾದರೆ ಸಾಲದು, ಸಾಂಸ್ಕೃತಿಕ ಏಕೀಕರಣವಾಗಬೇಕು ಎಂದು ಪ್ರತಿಪಾದಿಸಿದರ. ಸುಮಾರು 30ಕ್ಕಿಂತ ಹೆಚ್ಚು ಕೃತಿಗಳನ್ನು ಬರೆದಿರುವ ಆಲೂರು ವೆಂಕಟರಾಯರು ನನ್ನ ಜೀವನ ಸ್ಮೃತಿಗಳು (1941) ಎಂಬ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಇದು ಆಧುನಿಕ ಕರ್ನಾಟಕದ ಇತಿಹಾಸವೇ ಆಗಿದೆ.

25.02.1964ರಂದು ಆಲೂರು ವೆಂಕಟರಾಯರು ಧಾರವಾಡದಲ್ಲಿ ಇಹಲೋಕವನ್ನು ತ್ಯಜಿಸಿದರು. ಸಮಗ್ರ ಕರ್ನಾಟಕ ಅವರ ದೃಷ್ಟಿ. ಅದಕ್ಕಾಗಿಯೇ ತಮ್ಮ ಬದುಕನ್ನು ಮೀಸಲಾಗಿಟ್ಟಿದ್ದರು. ಕನ್ನಡ ಭಾಷೆ, ಸಾಹಿತ್ಯ, ಶಿಕ್ಷಣ, ಧರ್ಮ, ಪತ್ರಿಕೋದ್ಯಮ, ಇತಿಹಾಸಕ್ಕೆ ಆಲೂರ ವೆಂಕಟರಾವ್ ಕೊಡುಗೆ ಅಪಾರ. ಕನ್ನಡಿಗರು ಮರೆಯದ ವ್ಯಕ್ತಿತ್ವ ವೆಂಕಟರಾಯರು.

## ಸುರಪುರದ ವೀರ ವನಿತೆ ರಾಣಿ ಈಶ್ವರಮ್ಮ

ನಮ್ಮ ಭಾರತದ ಮೇಲೆ ಆಕ್ರಮಣ ಮಾಡಿದ ಆಂಗ್ಲರ ದಮನಕಾರಿ ನೀತಿ,ಅತ್ಯಾಚಾರ & ಅನಾದರಗಳಿಗೆ ಸಿಡಿದೆದ್ದು ಉತ್ತರ ಭಾರತ, ದಕ್ಷಿಣ ಭಾರತದ ರಾಜರು,ಕ್ರಾಂತಿಕಾರಿಗಳು, ಸೈನಿಕರು ತಾಳಿ,ಲಾರ್ಡ್ ಡಾಲಹೌಸಿಯ ದುರುದ್ದೇಶದಿಂದ ಕೂಡಿದ ತಪ್ಪು ನೀತಿಗಳಿಂದ ರೊಚ್ಚಿಗೆದ್ದ ದೇಶದ ಜನರು ದಂಗೆ ಎದ್ದರು.10–5–1857 ರಂದು ಸ್ವಾತಂತ್ರ್ಯದ ಪ್ರಥಮ ಕಹಳೆ ಮೊಳಗಿತು.ಝಾನ್ಸಿ,ಮೀರತ್,ದಿಲ್ಲಿ,ಕಾನ್ಪುರ,ಲಕ್ನೋಗಳಲ್ಲಿಯೂ ರಾಜಕೀಯ ದಂಗೆಗಳಾದವು,ನಾನಾಸಾಹೇಬ,ತಾತ್ಯಾಟೋಪಿ ಹುತಾತ್ಮರಾದರು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಆಂಗ್ಲರ ವಿರುದ್ಧ ಪ್ರತಿಭಟನೆಯನ್ನು ಒಡ್ಡಿದ ನಾಡಿನ ಅನೇಕ ವನಿತೆಯರಲ್ಲಿ ಸುರಪುರದ ರಾಣಿ ಈಶ್ವರಮ್ಮನಿಗೆ ಅಗ್ರಸ್ಥಾನವಿದೆ.ರಾಣಿಯ ಮಗ ನಾಲ್ವಡಿ ರಾಜಾ ವೆಂಕಟಪ್ಪ ನಾಯಕನ ಉಸ್ತುವಾರಿಯಾಗಿ ಬಂದ ಆಂಗ್ಲ ಅಧಿಕಾರಿ ಮೆಡೋಸ್ ಟೇಲರ್ ನನ್ನು ಎದುರಿಸಿದ ದಿಟ್ಟ ಮಹಿಳೆ ರಾಣಿ ಈಶ್ವರಮ್ಮ.ತನ್ನ ಆಡಳಿತದಲ್ಲಿ ಟೇಲರ್ ನ ಹಸ್ತಕ್ಷೇಪವನ್ನು ಸಹಿಸದ ರಾಣಿ, ತನ್ನ ಮಗನನ್ನು ಬ್ರಿಟಿಷರ ವಿರುದ್ಧ ಹೋರಾಡಲು ಸಜ್ಜುಗೊಳಿಸುತ್ತಾಳೆ.ಅಂದಿನ ಕಾಲದ ಘೋಷಾ ಪದ್ಧತಿ & ಸುರಪುರ ಸಂಸ್ಥಾನ ಎದುರಿಸುತ್ತಿದ್ದ ಹಲವಾರು ಸಮಸ್ಯೆಗಳ ಮಧ್ಯೆಯೂ ಕೂಡ ರಾಣಿ ತನ್ನ ದಿಟ್ಟತನದಿಂದಾಗಿ ವಿಭಿನ್ನವಾಗಿ ನಿಲ್ಲುತ್ತಾಳೆ.ಚೆನ್ನಬಸಪ್ಪ ಎಂಬ ನಿಷ್ಠಾವಂತನನ್ನು ತನ್ನ ಸಹಾಯಕನನ್ನಾಗಿ ನಿಯಮಿಸಿ,ರಾಣಿ ಆಡಳಿತ ನಡೆಸುತ್ತಾಳೆ.ತನ್ನನ್ನು ವಿರೋಧಿಸುವ ರಾಣಿಯ ನಡತೆಯ ಕುರಿತು ಆಂಗ್ಲ ಅಧಿಕಾರಿ ಟೇಲರ್ ತನ್ನ 'ಮ್ಶಿಜ ಣಂಡಿಥಿ ಂಜಿ ಟಥಿ ಟುಜಿಜ' ಎಂಬ ಪುಸ್ತಕದಲ್ಲಿ ಕೆಟ್ಟದಾಗಿ ಬರೆಯುತ್ತಾನೆ.ಇದು ರಾಣಿಗೆ ಘಾಸಿಗೊಳಿಸಿದರೂ ಆಕೆ ತನ್ನ ಸಂಸ್ಥಾನದ ಮುನ್ನಡೆಯ ದೃಷ್ಟಿಯಿಂದ ಸಹಿಸಿಕೊಂಡಳು ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.

ಅಂದಿನ ಸುರಪುರ ಸಂಸ್ಥಾನದಲ್ಲಿದ್ದ 12000 ಬೇಡ ಸೈನಿಕರು,ವನದುರ್ಗದ ಬೇಡಪಡೆ ರಾಣಿಗೆ ಬೆಂಗಾವಲಾಗಿ ನಿಲ್ಲುತ್ತಾರೆ.ಆದರೆ ಆಂಗ್ಲರ ಗ್ರಿಸ್ಲೆ ಹಾಗೂ ಹೈದರಾಬಾದ ನಿಜಾಮರು ಪಿಡ್ಡನಾಯಕನನ್ನು ಪಟ್ಟಕ್ಕೇರಿಸಬೇಕೆಂಬ ಆಸೆಯನುಳ್ಳವರಾಗಿದ್ದರು,ಅದರಲ್ಲಿ ಮುಖ್ಯವಾಗಿ ರಾಣಿಯನ್ನು ಮಣಿಸುವ ಕುತಂತ್ರವೂ ಸೇರಿತ್ತು. ಪಿಡ್ಡನಾಯಕನು ತಮ್ಮ ಕೈಗೊಂಬೆಯಾದರೆ ಸುರಪುರ ಸಂಸ್ಥಾನ ತಮ್ಮ ಸುಪರ್ದಿಗೆ ಬರುವುದೆಂಬ ಕೆಟ್ಟ ಆಲೋಚನೆಯಿಂದ ಪಿಡ್ಡನಾಯಕನನ್ನು ಸುರಪುರದ 'ದಿವಾನ್'ಎಂದು ಬ್ರಿಟಿಷರು ಘೋಷಿಸುತ್ತಾರೆ,ಅಸಮರ್ಥನ ಕೈಗೆ ಅಧಿಕಾರ ಕೊಡುವುದರಿಂದ ಆಂಗ್ಲರು ಇಡೀ ಅಧಿಕಾರವನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಲು ಹಾತೊರೆಯುತ್ತಿದ್ದಾರೆಂದು ಅರಿತ ರಾಣಿ ಕ್ರುದ್ಧಳಾದಳು.ಅದಕ್ಕಾಗಿ ರಾಣಿ ರೋಹಿಲರನ್ನು ತನ್ನ ಸೈನ್ಯಕ್ಕೆ ಸೇರಿಸಿಕೊಂಡು ಸೈನ್ಯವನ್ನು ಮತ್ತಷ್ಟು ಬಲಪಡಿಸುತ್ತಾಳೆ. ಇದರಿಂದ ಹೆದರಿದ ಆಂಗ್ಲರು ರಾಣಿಯ ಓಲೈಕೆಗೆ ನಿಲ್ಲುತ್ತಾರೆ. ಕೊನೆಗೂ ಪಿಡ್ಡನಾಯಕನನ್ನು' ದಿವಾನ ' ನನ್ನಾಗಿ ಮಾಡುವಲ್ಲಿ ಬ್ರಿಟಿಷರು ಯಶಕಾಣುತ್ತಾರೆ.ನಂತರ ದಿನಕಳೆದಂತೆ ದಿವಾನರಿಗೆ ರಾಣಿ ಅಧಿಕಾರ ಹಸ್ತಾಂತರಿಸಬೇಕೆಂದು ಆಂಗ್ಲರ ರೆಸಿಡೆಂಟನು ಆದೇಶಿಸಿದನು,ಆದರೆ ಇದನ್ನು ರಾಣಿಯು ಧಿಕ್ಕರಿಸುತ್ತಾಳೆ.

ಗ್ರಿಸ್ಲೆಯು ಕುತಂತ್ರದಿಂದ,ಹಿಂಬಾಗಿಲಿನಿಂದ ಅಧಿಕಾರದ ಸಮೀಪಬಂದು ರಾಣಿಗೆ ನಾನಾರೀತಿಯ ತೊಂದರೆಗಳನ್ನು ಕೊಡುತ್ತಾನೆ.ಆದರೆ ರಾಣಿಯ ಸಂಘಟನಾ ಶಕ್ತಿಯ ಮುಂದೆ ಗ್ರಿಸ್ಲೆಯ ಆಟ ನಡೆಯುವುದಿಲ್ಲ, ಕೊನೆಗೆ ಅವನು ರಾಣಿಯ ಧೀಶಕ್ತಿಗೆ ಸೋತು ರಾಜೀನಾಮೆಯನ್ನು ಕೊಟ್ಟು ಅಲ್ಲಿಂದ ಹೊರಟುಹೋಗುತ್ತಾನೆ.

ನಂತರ ಬಂದ ಮೆಡೋಸ್ ಟೇಲರ್ ಉಪಾಯವಾಗಿ ಇಲ್ಲಿನವರಂತೆಯೇ ಮಾತಾಡಿ,ರಾಜಕುಮಾರನಿಗೆ ಒಳ್ಳೆಯ ಶಿಕ್ಷಣ ನೀಡಿ, ಎಲ್ಲರ ಪ್ರೀತಿಗಳಿಸಿದಂತೆ ಮಾಡಿ, 'ಸುರಪುರದ ಸಿಂಹ' ವನ್ನು ಬೋನಿನಲ್ಲಿ ಕೂಡಿಡಲು ಪ್ರಯತ್ನಿಸುತ್ತಾನೆ.ರಾಣಿಗೆ ಉಪಾಯವಾಗಿ ನಾನಾ ರೀತಿಯಿಂದ ತೊಂದರೆಕೊಡುತ್ತಾನೆ. ಆದರೆ ಬೇಡರ ಪಡೆಯ ಮುಂದೆ ಅವನ ಆಟ ನಡೆಯುವುದಿಲ್ಲ. ಕೊನೆಗೆ ಪುಟ್ಟ ರಾಜ ರಾಜಾ ವೆಂಕಟಪ್ಪ ನಾಯಕನನ್ನು ಒಲಿಸಿಕೊಂಡು,ಕುಟಿಲ ನೀತಿಯಿಂದ ತನ್ನ ಕೆಲಸ ಸಾಧಿಸಿಕೊಂಡ. ಅನಾರೋಗ್ಯಪೀಡಿತಳಾದ ರಾಣಿಯು ತಿರುಪತಿಗೆ ಹೋಗುವಾಗ ಲಿಂಗಸುಗೂರ ಹತ್ತಿರ 1853 ರ ಮೇ 27 ರಂದು ಅಸುನೀಗುತ್ತಾಳೆ.

ರಾಣಿ ಈಶ್ವರಮ್ಮನ ಹೋರಾಟವು ಆಂಗ್ಲರನ್ನು ದಂಗು ಬಡಿಸಿತ್ತು.ದುರಂತವೆಂದರೆ ಇವಳ ಹೋರಾಟದ ಬಗ್ಗೆ ಇತಿಹಾಸದಲ್ಲಿ ಸರಿಯಾದ ದಾಖಲೆಗಳು ಲಭ್ಯವಿಲ್ಲದ ಕಾರಣ ಕಿತ್ತೂರ ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀದೇವಿಯರಿಗೆ ಸಿಕ್ಕಷ್ಟು ಪ್ರಾಧಾನ್ಯತೆ ರಾಣಿ ಈಶ್ವರಮ್ಮನಿಗೆ ಸಿಗಲೇ ಇಲ್ಲ.ಆದರೆ ಜಾನಪದರು ತಮ್ಮ ರಾಣಿಯ ಬಗ್ಗೆ ಹಾಡಿದ ಲಾವಣಿಗಳು ಅವಳನ್ನು ಚರಿತ್ರೆಯಲ್ಲಿ ಅಜರಾಮರವನ್ನಾಗಿಸಿವೆ.ಅವರು ತಮ್ಮ ಲಾವಣಿಯಲ್ಲಿ ರಾಣಿಯನ್ನು 'ಸ್ವಾಭಿಮಾನದ ಗಣಿ ' ಯೆಂದು ಅವಳ ಪುತ್ರ ನಾಲ್ವಡಿ ರಾಜಾ ವೆಂಕಟಪ್ಪ ನಾಯಕನನ್ನು 'ಅವ್ವ ಈಶ್ವರಮ್ಮನ ವರವೀರಪುತ್ರ' ಎಂದು ಬಣ್ಣಿಸಿದ್ದಾರೆ.

ರಾಣಿ ಈಶ್ವರಮ್ಮನ ಕುರಿತು ಲಾವಣಿಕಾರರು–

' ರಾಣಿ ಈಶ್ವರಮ್ಮ ನಾಡಿಗೆ ತಕ್ಕವಳು
ನಡುಕ ಹುಟ್ಟಿಸಿದಳೋ! ಟೇಲರ್ ಸಾಯ್ಯಾಗ
ಬೈಗುಳದ ಸುರಿಮಳೆ ಸುರಿಸಿದಳೋ
' ಚೆನ್ನದ ಗುಣದವಳು,ದಿಟ್ಟ ನಿಲುವಿನವಳು
ಭಾಷೆಗೆ ತಪ್ಪದವಳು! ಈಶ್ವರಮ್ಮ
ಮಗನ ರಕ್ಷಣೆಗೆ ನಿಂತವಳು'
' ಉಪ್ಪಿರಿಗೆ ಮನೆ ಬೇಕು,ಕೊಪ್ಪರಿಗೆ ಹಣ ಬೇಕು
ರಾಣಿ ಈಶ್ವರಮ್ಮನಂಥ ಸೊಸೆ ಬೇಕು ! ನಮ್ಮನೆಗೆ
ಸುರಪುರ ರಾಜನಂಥ ಮಗ ಬೇಕು'

ಎಂದು ಸುರಪುರ ಸಂಸ್ಥಾನದ ಅರಸರ ಕುರಿತು ಹಾಡುತ್ತಾರೆ.ಈ ಸಂಸ್ಥಾನದ ಉಳಿದ ದೊರೆಗಳ ಬಗ್ಗೆ ,ರಾಣಿಯರ ಬಗ್ಗೆ ಜನಪದರು ಲಾವಣಿ ಕಟ್ಟಿ ಹಾಡಲಿಲ್ಲ, ಆದರೆ ರಾಣಿ ಈಶ್ವರಮ್ಮ & ಅವಳ ಪುತ್ರನ ಕುರಿತಾಗಿಯೇ ಹಾಡುಗಳು,ಲಾವಣಿ,ದುಂದುಮೆ ಪದಗಳು ಹುಟ್ಟಿಕೊಂಡಿವೆ.ಇದರಿಂದಲೇ ನಮಗೆ ರಾಣಿಯ ಕುರಿತು ಜನತೆಗೆ ಎಷ್ಟು ಪ್ರೀತಿ,ಆದರವಿತ್ತು ಎಂದು ಸ್ಪಷ್ಟವಾಗುತ್ತದೆ.

ನಮ್ಮ ನೆಲ,ಜಲ,ಸಂಪತ್ತನ್ನು ಕೊಳ್ಳೆಹೊಡೆಯಲು ಬಂದ ಇಂಗ್ಲಿಷ ರಿಗೆ ಸರಿಯಾದ ಪಾಠ ಕಲಿಸಿದ ಕೀರ್ತಿ ಹಾಗೂ ನಿಜಾಮನನ್ನೂ ಮತ್ತು ತನ್ನ ರಾಜ್ಯದಲ್ಲಿಯೇ ಇದ್ದ ಹಿತಶತ್ರುಗಳನ್ನು ರಾಣಿ ಹಿಮ್ಮೆಟ್ಟಿಸಿದ ರೀತಿಯು ನಿಜಕ್ಕೂ ವಿಸ್ಮಯಕಾರಿ.ಆಂಗ್ಲರ ಯಾವ ಮಾತಿಗೂ ಮನ್ನಣೆ ನೀಡದೆ,ಅವರ ಸಂಧಾನವನ್ನು ತಿರಸ್ಕರಿಸಿದ ರಾಣಿ ಈಶ್ವರಮ್ಮ ಬಹಳ ಸಂದಿಗ್ಧ ಪರಿಸ್ಥಿತಿಯಲ್ಲಿ ಅಧಿಕಾರದ ಚುಕ್ಕಾಣಿಯನ್ನು ಹಿಡಿದು ತನ್ನ ಏಳು ವರ್ಷದ ಮಗನನ್ನು ಮುಂದಿಟ್ಟುಕೊಂಡು, ನಿಷ್ಠಾವಂತ ಬೇಡರ ಪಡೆಯ ಬೆಂಬಲದಿಂದ ರಾಜ್ಯವಾಳಿದಳು.ತನ್ನ ಚಿಕ್ಕ ಪ್ರಾಯದ ಮಗನಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿ,ಇಡೀ ದಕ್ಷಿಣ ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆಯಲು ಕಾರಣಳಾದವಳು ಸುರಪುರದ ಧೀರವನಿತೆ ರಾಣಿ ಈಶ್ವರಮ್ಮ.

**ಶ್ರೀಮತಿ ವೀಣಾ ಬರಗಿ**
**ಹುಬ್ಬಳ್ಳಿ**

## ತೊಂಡೈಮಂಡಲಾಧಿಪತಿ ಮೂರನೆಯ ಕೃಷ್ಣ

ವಿಶ್ವ ವಿನೂತನ ವಿದ್ಯಾ ಚೇತನಸರ್ವ ಹೃದಯ ಸಂಸ್ಕಾರಿ ಜಯ ಭಾರತಿ ಕರುನಾಡ ಸರಸ್ವತಿಗುಡಿ ಗೋಪುರ ಸುರ ಶಿಲ್ಪ ಕಲಾಕೃತಿಕೃಷ್ಣೆ ತುಂಗೆ ಕಾವೇರಿಪವಿತ್ರಿತ ಕ್ಷೇತ್ರ ಮನೋಹಾರಿ ಗಂಗ ಕದಂಬ ರಾಷ್ಟ್ರಕೂಟ ಬಲಚಾಲುಕ್ಯ ಹೊಯ್ಸಳ ಬಲ್ಲಾಳಹಕ್ಕ ಬುಕ್ಕ ಪುಲಿಕೇಶಿ ವಿಕ್ರಮರಚೆನ್ನಮ್ಮಾಜಿಯ ವೀರಶ್ರೀ ಮೂರನೇ ಕೃಷ್ಣ (ಕಣ್ಣಾರ) ರಾಷ್ಟ್ರಕೂಟ ಸಾಮ್ರಾಜ್ಯದ ಕೊನೆಯ ಮಹಾನ್ ಚಕ್ರವರ್ತಿ ಆಳ್ವಿಕೆಯ ಅವಧಿ: ಕ್ರಿ.ಶ. 939967 (ಸುಮಾರು 28 ವರ್ಷ) ದೊರೆಯ ಆಡಳಿತಾವಧಿಯಲ್ಲಿ ಮಾಡಿದ ಸಾಧನೆಗಳು ಮತ್ತು ವಿಜಯಗಳು

### ■ ತಕೋಳಂ ಕದನ (ಕ್ರಿ.ಶ. 949) ಚೋಳರ ವಿರುದ್ಧದ ಮಹಾ ಯುದ್ಧ

ತಕೋಳಂ ಯುದ್ಧವು (ಇಂದಿನ ತಮಿಳುನಾಡಿನ ವೆಲ್ಲೋರ್ ಜಿಲ್ಲೆಯ ತಕೋಳಂ ಪ್ರದೇಶದಲ್ಲಿ ನಡೆದದ್ದು) ದಕ್ಷಿಣ ಭಾರತದ ಶಕ್ತಿಯ ಸಮತೋಲನವನ್ನು ಬದಲಾಯಿಸಿದ ಪ್ರಸಿದ್ಧ ಯುದ್ಧ. ಈ ಯುದ್ಧದಲ್ಲಿ ಮೂರನೇ ಕೃಷ್ಣನು ಚೋಳ ದೊರೆ ಒಂದನೇ ಪರಾಂತಕನ ಪುತ್ರ ರಾಜಾದಿತ್ಯನನ್ನು ಸೋಲಿಸಿದನು.

ಶಾಸನಗಳಲ್ಲಿ ರಾಜಾದಿತ್ಯನು ತಕೋಳಂನಲ್ಲಿ ಬಾಣದ ಮಳೆಯಲ್ಲಿ ಹತನು ಎಂದು ಉಲ್ಲೇಖವಾಗಿದೆ.

ಈ ಗೆಲುವಿನ ಫಲವಾಗಿ ಕಂಚಿ, ತೊಂಡೈಮಂಡಲ, ಚೆಂಗಲ್ಪಟ್ಟು ಮೊದಲಾದ ಪ್ರದೇಶಗಳು ರಾಷ್ಟ್ರಕೂಟರ ಅಡಿಪತ್ಯಕ್ಕೆ ಬಂದುವು. ಯುದ್ಧದ ಬಳಿಕ ಕೃಷ್ಣನು ತೊಂಡೈಮಂಡಲಾಧಿಪತಿ ಎಂಬ ಬಿರುದು ಧರಿಸಿದನೆಂಬ ಸಾಕ್ಷ್ಯವಿದೆ.

### ■ ದಕ್ಷಿಣಾಭಿಯಾನ ಮತ್ತು ರಾಮೇಶ್ವರಂ ವಿಜಯೋತ್ಸವ

ಚೋಳರ ಪ್ರಭಾವವನ್ನು ಕುಗ್ಗಿಸಿದ ನಂತರ, ಕೃಷ್ಣನು ತನ್ನ ಸೈನ್ಯವನ್ನು ದಕ್ಷಿಣಕ್ಕೆ ಕಳುಹಿಸಿ ರಾಮೇಶ್ವರಂವರೆಗೂ ಪ್ರವೇಶಿಸಿದನು. ಅಲ್ಲಿಯೇ ತನ್ನ ವಿಜಯದ ಸ್ಮರಣಾರ್ಥವಾಗಿ ವಿಜಯಸ್ತಂಭ (ಜಯಸ್ತಂಭ) ಮತ್ತು ದೇವಾಲಯವನ್ನು ನಿರ್ಮಿಸಿದನೆಂಬ ಶಾಸನಗಳು ದೊರೆಯುತ್ತವೆ.

ಪಾಂಡ್ಯರು, ಚೇರರು, ಮತ್ತು ಸಿಂಹಳದ ರಾಜರಿಂದ ಬರುವ ಕಾಣಿಕೆಗಳು ಈತನ ವ್ಯಾಪಕ ಪ್ರಭಾವವನ್ನು ತೋರಿಸುತ್ತವೆ. ಸಿಂಹಳದ ದೊರೆ (ಆ ಕಾಲದ ಶ್ರೀಲಂಕಾ ರಾಜ) ಕೃಷ್ಣನಿಗೆ ಕಾಣಿಕೆ ನೀಡಿದನೆಂಬ ಉಲ್ಲೇಖ ಕಂದೂರಿನ ಶಾಸನಗಳಲ್ಲಿ ದೊರೆಯುತ್ತದೆ.

### ■ ಉತ್ತರ ಮತ್ತು ಪಶ್ಚಿಮ ದಿಕ್ಕಿನ ಸಾಧನೆಗಳು

ಕೃಷ್ಣನು ಉತ್ತರದ ಮಾಲ್ವಾ ಪರಮಾರರ (ಎರಡನೆಯ ಸಿಯಕ ) ವಿರುದ್ಧ ಯಶಸ್ವಿ ಯುದ್ಧಗಳನ್ನು ನಡೆಸಿದನು. ಅಲ್ಲದೆ ಪಶ್ಚಿಮ ದಿಕ್ಕಿನಲ್ಲಿಯೂ ಗುರಜರ–ಪ್ರತಿಹಾರ ಶಕ್ತಿಯನ್ನು ನಿಯಂತ್ರಣದಲ್ಲಿಟ್ಟನು. ಈ ಮೂಲಕ, ರಾಷ್ಟ್ರಕೂಟ ಸಾಮ್ರಾಜ್ಯವು ನರ್ಮದಾ ನದಿಯಿಂದ ರಾಮೇಶ್ವರಂವರೆಗೆ, ಹಾಗೂ ಅರಬ್ಬೀ ಸಮುದ್ರದಿಂದ ಕೊಲ್ಲೀಡಂ ನದಿವರೆಗೂ ವ್ಯಾಪಿಸಿತು ಇದು ರಾಷ್ಟ್ರಕೂಟರ ಇತಿಹಾಸದ ಅತ್ಯಂತ ವಿಸ್ತೃತ ವ್ಯಾಪ್ತಿ.

ಆಡಳಿತ ಮತ್ತು ರಾಜ್ಯವ್ಯವಸ್ಥೆ

ಮೂರನೇ ಕೃಷ್ಣನು ಶಕ್ತಿಶಾಲಿ ಸೈನಿಕನಷ್ಟೇ ಅಲ್ಲ, ಚಾತುರ್ಯಪೂರ್ಣ ಆಡಳಿತಗಾರನೂ ಆಗಿದ್ದನು.

ಮಾನ್ಯಖೇಟ (ಮಳಖೇಡ) ರಾಜಧಾನಿ ಇವನ ಕಾಲದಲ್ಲಿ ಪುನಃ ವೈಭವ ಪಡೆದು ವಾಣಿಜ್ಯ ಮತ್ತು ಸಂಸ್ಕೃತಿಯ ಕೇಂದ್ರವಾಯಿತು.

ಈತನು ರಾಜ್ಯದ ಎಲ್ಲ ಭಾಗಗಳಲ್ಲಿ ಮಾಂಡಲಿಕ ವ್ಯವಸ್ಥೆ (ಮಂಡಲವಿಷಯಗ್ರಾಮ)ಗಳನ್ನು ಬಲಪಡಿಸಿ ಪ್ರಾದೇಶಿಕ ನಾಯಕರನ್ನು ನಿಷ್ಠಾವಂತರನ್ನಾಗಿ ಮಾಡಿದ್ದನು. ಆತನ ಶಾಸನಗಳಲ್ಲಿ ಅಖಂಡ ಭಾರತಾಧಿಪತಿ, ಸತ್ಯವರ್ತಿ, ತಕೋಳಂ ಜಯೀ, ದಕ್ಷಿಣಪಥಾಧೀಶ್ವರ ಮೊದಲಾದ ಬಿರುದುಗಳು ದೊರೆಯುತ್ತವೆ.

**ಸಾಹಿತ್ಯ ಮತ್ತು ಸಂಸ್ಕೃತಿಗೆ ಕೊಡುಗೆ**

### ■ ಪೊನ್ನನ ಆಶ್ರಯ

ಮೂರನೇ ಕೃಷ್ಣನ ಆಸ್ಥಾನದಲ್ಲಿ ಕನ್ನಡದ ಮೂರನೇ ರತ್ನ ಎಂದೆನಿಸಿಕೊಂಡ ಮಹಾಕವಿ ಪೊನ್ನನು ಆಶ್ರಯ ಪಡೆದನು. ಪೊನ್ನನು ತನ್ನ ಕಾವ್ಯಗಳಲ್ಲಿ ಕೃಷ್ಣನನ್ನು ಕವಿಗೌರವ, ದಿಗ್ವಿಜಯ ಚಕ್ರವರ್ತಿ ಎಂದು ಹೊಗಳಿದ್ದಾನೆ. ಅವನ ಭುವನೈಕ ರಾಮಾಭ್ಯುದಯ ಕಾವ್ಯವು ಕೃಷ್ಣನ ವಿಜಯಗಳನ್ನು ರಾಮಾಯಣದ ಕಥೆಯೊಂದಿಗೆ ಹೋಲಿಸಿ ವೀರಗಾಥೆ ರೂಪದಲ್ಲಿ ಚಿತ್ರಿಸುತ್ತದೆ.



ಶಾಂತಿಪುರಾಣ ಕೃತಿಯಲ್ಲಿ ಪೊನ್ನನು ಜೈನ ತೀರ್ಥಂಕರ ಶಾಂತಿನಾಥನ ಕಥೆ ಹೇಳುತ್ತಾನೆ ಇದರಿಂದ ಕೃಷ್ಣನ ಧಾರ್ಮಿಕ ಸಹಿಷ್ಣುತೆಯು ಸ್ಪಷ್ಟವಾಗುತ್ತದೆ.

### ■ ಧರ್ಮ ಮತ್ತು ಸಹಿಷ್ಣುತೆ

ಕೃಷ್ಣನು ಶೈವನಾಗಿದ್ದರೂ, ಜೈನ, ವೈಷ್ಣವ ಮತ್ತು ಬೌದ್ಧ ಧರ್ಮಗಳಿಗೂ ಗೌರವ ನೀಡಿದನು.

ಹಲವು ಜೈನ ಬಸದಿಗಳು ಮತ್ತು ಮಠಗಳಿಗೆ ದತ್ತಿಗಳನ್ನು ನೀಡಿದನೆಂಬ ದಾಖಲೆಗಳು ಕಲಬುರಗಿ ಮತ್ತು ಬೆಳಗಾವಿಯ ಶಾಸನಗಳಲ್ಲಿ ದೊರೆಯುತ್ತವೆ.

### ■ ಕಲಾವಾಸ್ತುಶಿಲ್ಪದ ಉತ್ತೇಜನೆ

ಮೂರನೇ ಕೃಷ್ಣನ ಕಾಲದಲ್ಲಿ ರಾಷ್ಟ್ರಕೂಟ ಶಿಲ್ಪಶೈಲಿ ಮತ್ತೊಮ್ಮೆ ಪ್ರಚೋದನೆ ಕಂಡಿತು. ಎಲ್ಲೋರಾ,ಶಿಲಾಗೃಹ ಶೈಲಿಯಂತಹ ಶಿಲ್ಪಕಲೆಗಳ ಪ್ರಭಾವದಿಂದ ಹೊಸ ದೇವಸ್ಥಾನಗಳು ನಿರ್ಮಿಸಲ್ಪಟ್ಟುವು.




ಕೆಲ ಶಾಸನಗಳು ಮೂರನೇ ಕೃಷ್ಣನ ಕಾಲದಲ್ಲಿ ಪಟ್ಟದಕಲ್ಲಿನ ಶೈಲಿಯ ದೇವಸ್ಥಾನಗಳು ಪುನರ್‌ವೈಭವ ಪಡೆದವು ಎಂದು ಸೂಚಿಸುತ್ತವೆ.

ಇವನ ಮರಣ ಮತ್ತು ಸಾಮ್ರಾಜ್ಯದ ಅಂತ್ಯ

ಕ್ರಿ.ಶ. 967ರ ಸುಮಾರಿಗೆ ಮೂರನೇ ಕೃಷ್ಣನ ನಿಧನದ ನಂತರ, ಅವನ ಉತ್ತರಾಧಿಕಾರಿಗಳು ದುರ್ಬಲರಾಗಿದ್ದರು. ಅದಾದ ಮೇಲೆ ರಾಷ್ಟ್ರಕೂಟ ಸಾಮ್ರಾಜ್ಯವು ವೇಗವಾಗಿ ಕುಸಿತ ಕಂಡಿತು. ಇವನ ಮರಣದ ನಂತರ ಮಾನ್ಯಖೇಟವನ್ನು ಪರಮಾರರು ಮತ್ತು ನಂತರ ಪಶ್ಚಿಮ ಚಾಲುಕ್ಯರು ಆಕ್ರಮಿಸಿದರು. ಆದಾಗ್ಯೂ, ಮೂರನೇ ಕೃಷ್ಣನ ಕಾಲವನ್ನು ರಾಷ್ಟ್ರಕೂಟರ ಸುವರ್ಣಸಂಧ್ಯೆ ಎಂದು ಇತಿಹಾಸಕಾರರು ವರ್ಣಿಸುತ್ತಾರೆ ಅಂದರೆ ಆರಂಭಕ್ಕೂ ಅಂತ್ಯಕ್ಕೂ ಮಧ್ಯದ ಅದ್ಭುತ ಕ್ಷಣ. ಮೂರನೆಯ ಕೃಷ್ಣನ ಆಳ್ವಿಕೆಯು ರಾಷ್ಟ್ರಕೂಟರ 'ಮಹಾಕಾಲ'ದ ಕೊನೆಯ ಅಧ್ಯಾಯ.

ಇವನ ಸಾಮರ್ಥ್ಯ ಮತ್ತು ಪ್ರತಿಷ್ಠೆಯ ಮೇಲೆ ಸಾಮ್ರಾಜ್ಯ ನಿಂತಿತ್ತು. ಇವನ ಮರಣದ ನಂತರ, ರಾಷ್ಟ್ರಕೂಟರ ಅರಮನೆಯಲ್ಲಿ ಆಂತರಿಕ ಕಲಹಗಳು ಉಂಟಾದವು. ಈ ಅವಕಾಶವನ್ನು ಬಳಸಿಕೊಂಡ ಇವರ ಸಾಮಂತನಾದ ಎರಡನೆಯ ತೈಲಪನು (ಬಾದಾಮಿ ಚಾಲುಕ್ಯರ ವಂಶಸ್ಥ) ಮಾನ್ಯಖೇಟದ ಮೇಲೆ ದಾಳಿ ಮಾಡಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿ, ಕಲ್ಯಾಣಿ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈ ಕಾರಣಕ್ಕಾಗಿ ಮೂರನೆಯ ಕೃಷ್ಣನು "ರಾಷ್ಟ್ರಕೂಟ ಸಾಮ್ರಾಜ್ಯದ ಶ್ರೇಷ್ಠ ಹಾಗೂ ಅಂತಿಮ ಪ್ರಬಲ ಚಕ್ರವರ್ತಿ" ಎಂದು ಇತಿಹಾಸದಲ್ಲಿ ಗುರುತಿಸಲ್ಪಟ್ಟಿದ್ದಾನೆ.

ವೈಯಕ್ತಿಕ ಗುಣಗಳು ಮತ್ತು ಬಿರುದುಗಳು ಇವನಿಗೆ ಇತಿಹಾಸದಲ್ಲಿಯೇ ಪ್ರಸಿದ್ಧವಾದ ಬಿರುದು ಕಣ್ಣಾರ ದೇವ ಇದು ಆತನ ಶೌರ್ಯ ಮತ್ತು ದಯೆಯ ಪ್ರತೀಕವಾಗಿ ಲಭಿಸಿತ್ತು.

ಇವನ ವೈಯಕ್ತಿಕ ಜೀವನದಲ್ಲಿ ಸಹ ಧಾರ್ಮಿಕತೆ, ದಾನಶೀಲತೆ ಮತ್ತು ಪ್ರಜಾಪ್ರೀತಿ ಮುಖ್ಯ ಅಂಶಗಳಾಗಿದ್ದವು.

ಶಾಸನಗಳಲ್ಲಿ ಅವನನ್ನು ಭೂಮಂಡಲ ಚಕ್ರವರ್ತಿ, ರಾಜರಾಜ ಪರಮೇಶ್ವರ, ನಿತ್ಯವರ್ಷ, ತಕೋಳಂ ವಿಜಯ ಎಂದು ಕೊಂಡಾಡಲಾಗಿದೆ.

ಮೂರನೆಯ ಕೃಷ್ಣನನ್ನು ನಲ್ಲರಮರುಳ, ಆನೆವೆಡಂಗ, ಪರಾಂಗನಾಪುತ್ರ, ಕಚ್ಚೆಗ, ಎಂದು ವರ್ಣಿಸುವ ಶಾಸನವು, ಅಷ್ಟು ದೂರದಲ್ಲಿಯೂ, ಕನ್ನಡಿಗರ ಸಾಂಸ್ಕೃತಿಕ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಕಂದಪದ್ಯಗಳೂ ಇರುವ ಶಾಸನ ಪಾಠದಲ್ಲಿ ಕಚ್ಚೆಗ ಎಂಬ ಶಬ್ದವು ಕಂಚಿಯನ್ನು ಗೆದ್ದವನು ಎಂಬ ಅರ್ಥ ನೀಡಿ ಮೂರನೆಯ ಕೃಷ್ಣನ ರಾಜಕೀಯ ಪ್ರಾಬಲ್ಯವನ್ನು ಸ್ಪಷ್ಟಪಡಿಸುತ್ತದೆ. ಸೋಲದೆ ಪರವನಿತೆಗೆ ಕಣ್ಸೋಲದು । ಮೊಲೆವಾಲನೂಡಿ ನಡಪಿದ ತಾಯಿಂ ॥ ಮೇಲೆನೆ ಬಗೆಗುಂ ನೋಡಿರೆ । ಸೋಲದು ಚಿತ್ತಂ ಪರಾಂಗನಾ ಪುತ್ರಕನ ॥ ಎಂಬ ಕಂದಪದ್ಯದಲ್ಲಿ ಕೃಷ್ಣನಿಗೆ ಪರವನಿತೆಯರನ್ನು ಕಂಡಾಗ ಅವನ ಕಣ್ಣು ಕೂಡಾ ಸೋಲುತ್ತಿರಲಿಲ್ಲ ಮತ್ತು ಅಂತಹ ಸಂದರ್ಭದಲ್ಲಿ ಅವನಿಗೆ ಆಕೆಯು ಮೊಲೆಹಾಲನ್ನು ಕೊಟ್ಟು ಸಾಕಿದ ತಾಯಿಗಿಂತ ಹೆಚ್ಚು ಎಂಬ ಭಾವ ಇರುತ್ತಿತ್ತು ಎಂಬ ಮಾತು ಕೃಷ್ಣನ ದೊಡ್ಡತ ನವನ್ನು ದಾಖಲಿಸಿದೆ. ಅಷ್ಟೇ ಅಲ್ಲದೆ, ಪರವಧುವನ್ನು ಕಂಡಾಗ ಕೃಷ್ಣನಿಗೆ ನೋಡಿರೆ ಪರವಧುಗೆ ಮನಂ ಕೂಡದು, ಸೂಟ್ಸೊಟ್ಟೊಳೆತ್ತಿ ನಡಪಿದ ತೋಳುಣ್ಡಾಡಿದ ಮೊಲೆ, ಬಸಿಱೊಳಗಿಟ್ಟಾಡಿದ ಚಿತ್ತಂ ಪರಾಂಗನಾ ಪುತ್ರಕನ ಎಂಬ ಮಾತುಗಳಲ್ಲಿ ಕೃಷ್ಣನ ವ್ಯಕ್ತಿತ್ವ ಮತ್ತಷ್ಟು ಆಪ್ತವಾಗುತ್ತದೆ. ಕೃಷ್ಣನಿಗೆ ಪರವಧುವನ್ನು ಕಂಡಾಗ ಮನಸ್ಸೂ ಕೂಡುತ್ತಿರಲಿಲ್ಲ. ಬದಲಿಗೆ ಎತ್ತಿ ನಡೆಸಿದ ತೋಳು, ಉಂಡು ಆಡಿದ ಮೊಲೆ ಮತ್ತು ತಾಯಿಯ ಬಸಿರಿನಲ್ಲಿ ಇದ್ದಾಗ ಆಡಿದ ನೆನಪಾಗುತ್ತಿತ್ತಂತೆ. ಇಂತಹ ಒಬ್ಬ ದೊರೆಯ ಪ್ರತಿನಿಧಿಗಳು ನಾವು ಎಂದು ಹೇಳಿಕೊಳ್ಳಲು ಯಾರಿಗೆ ತಾನೆ ಹೆಮ್ಮೆಯಾಗುವುದಿಲ್ಲ ಕನ್ನಡಕೆ ಹೋರಾಡಿದ ಕನ್ನಡದ ಕಂದನಿಗೆ ನಮ್ಮ ಸಾದರಪೂರ್ವಕ ಶಿರಸಾಷ್ಟಾಂಗ ವಂದನೆಗಳು.


ರೂಪ ಮಂಜುನಾಥ
ಹೊಳೆನರಸೀಪುರ




Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,